www.inyatrust.com

2669517

EXAMINATION CODE : TET

ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ

(KARTET-2014 PAPER-I KM)

# ಪ್ರಶ್ನೆ ಪತ್ರಿಕೆ ಪುಸ್ತಿಕೆ-ಪತ್ರಿಕೆ-1

KM

## (ಕನ್ನಡ ಮಾಧ್ಯಮ)

**ಭಾಷೆ 1:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)**

**ಭಾಷೆ 2:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)**

**ಬಾಲವಿಕಾಸ ಮತ್ತು ಪೆಡಾಗಾಜಿ, ಗಣಿತ, ಪರಿಸರ ವಿಜ್ಞಾನ**

**(ಪ್ರಶ್ನೆಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ಓದಿರಿ)**

**ಗರಿಷ್ಠ ಅಂಕಗಳು : 150** | **ಗರಿಷ್ಠ ಅವಧಿ : 2.30 ಗಂಟೆಗಳು**

**(ಓ.ಎಂ.ಆರ್.ಉತ್ತರಪತ್ರಿಕೆಯಲ್ಲಿನ ವಿವರಗಳನ್ನು ಭರ್ತಿಮಾಡಲು ನೀಡುವ ಪ್ರಾರಂಭಿಕ 10 ನಿಮಿಷಗಳೂ ಸೇರಿದಂತೆ.)**

### ಸೂಚನೆಗಳು

1. 150 ಪ್ರಶ್ನೆಗಳಿರುವ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆ ಅಡಕವಾಗಿರುವ ಮೊಹರ್ ಆಗಿರುವ ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟಿರುವ ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನು ನಿಮಗೆ ನೀಡಲಾಗಿದೆ.
2. ನಿಮಗೆ ನೀಡಿರುವ ಪ್ರಶ್ನೆ ಪತ್ರಿಕೆ ಪುಸ್ತಿಕೆಯು ನೀವು ಆಯ್ಕೆ ಮಾಡಿಕೊಂಡಿರುವ ಪತ್ರಿಕೆ / ಮಾಧ್ಯಮಕ್ಕೆ ಸಂಬಂಧಿಸಿದಿಯೇ ಎಂಬುದನ್ನು ದೃಢಪಡಿಸಿಕೊಳ್ಳಿ.
3. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯು ಭಾಗ-I, ಭಾಗ-II, ಭಾಗ-III, ಭಾಗ-IV ಮತ್ತು ಭಾಗ-V ಎಂದು ಒಟ್ಟು 5 ಭಾಗಗಳನ್ನು ಹೊಂದಿದ್ದು, 150 ಬಹು ಆಯ್ಕೆ ಪ್ರಶ್ನೆಗಳನ್ನು ಹೊಂದಿರುತ್ತದೆ. ಪ್ರತಿ ಪ್ರಶ್ನೆಗೂ ಒಂದು ಅಂಕ ನಿಗದಿಪಡಿಸಲಾಗಿದೆ.

   ಭಾಗ - I ಭಾಷೆ 1 : (ಕನ್ನಡ /ಇಂಗ್ಲೀಷ್ /ಉರ್ದು /ತಮಿಳು /ತೆಲುಗು /ಮರಾಠಿ /ಹಿಂದಿ /ಸಂಸ್ಕೃತ) (ಪ್ರಶ್ನೆ ಸಂಖ್ಯೆ 1 ರಿಂದ 30)

   ಭಾಗ - II ಭಾಷೆ 2 : (ಕನ್ನಡ /ಇಂಗ್ಲೀಷ್ /ಉರ್ದು /ತಮಿಳು /ತೆಲುಗು /ಮರಾಠಿ /ಹಿಂದಿ /ಸಂಸ್ಕೃತ) (ಪ್ರಶ್ನೆ ಸಂಖ್ಯೆ 31 ರಿಂದ 60)

   ಭಾಗ - III ಬಾಲವಿಕಾಸ ಮತ್ತು ಪೆಡಾಗಾಜಿ (ಪ್ರಶ್ನೆ ಸಂಖ್ಯೆ 61 ರಿಂದ 90)

   ಭಾಗ - IV ಗಣಿತ (ಪ್ರಶ್ನೆ ಸಂಖ್ಯೆ 91 ರಿಂದ 120)

   ಭಾಗ - V ಪರಿಸರ ವಿಜ್ಞಾನ (ಪ್ರಶ್ನೆ ಸಂಖ್ಯೆ 121 ರಿಂದ 150)
4. ಭಾಗ-I ರಲ್ಲಿ ಭಾಷೆ-1 ವಿಷಯಕ್ಕೆ ಸಂಬಂಧಿಸಿದಂತೆ 30 ಪ್ರಶ್ನೆಗಳನ್ನು ಹೊಂದಿರುತ್ತದೆ ಮತ್ತು ಭಾಗ-II ರಲ್ಲಿ ಭಾಷೆ-2 ವಿಷಯಕ್ಕೆ ಸಂಬಂಧಿಸಿದಂತೆ 30 ಪ್ರಶ್ನೆಗಳನ್ನು ಹೊಂದಿರುತ್ತದೆ. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ಎಲ್ಲಾ ಭಾಷೆಗಳಿಗೂ ಸಂಬಂಧಿಸಿದಂತೆ ಪ್ರಶ್ನೆಗಳು ಇರುತ್ತವೆ. ನೀವು ನಿಮ್ಮ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ / ಪ್ರವೇಶ ಪತ್ರದಲ್ಲಿ ನಮೂದಿಸಿರುವ ಭಾಷೆಗಳನ್ನೇ ಆಯ್ಕೆ ಮಾಡಿಕೊಂಡು ಭಾಷೆ-1 ಮತ್ತು ಭಾಷೆ-2 ಕ್ಕೆ ಉತ್ತರಿಸುವುದು ಕಡ್ಡಾಯವಾಗಿರುತ್ತದೆ.
5. ಅಭ್ಯರ್ಥಿಗಳು ಭಾಗ-II ರಲ್ಲಿನ ಭಾಷೆ-2 ಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸುವಾಗ ಭಾಷೆ-1 ನ್ನು (ಭಾಗ-I) ಹೊರತುಪಡಿಸಿ ಇತರ ಭಾಷೆಯನ್ನು ಆಯ್ಕೆ ಮಾಡಿಕೊಂಡು ಉತ್ತರಿಸಬೇಕು.
6. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ಭಾಗ-III, ಭಾಗ-IV ಮತ್ತು ಭಾಗ-V ಕ್ಕೆ ಸಂಬಂಧಿಸಿದಂತೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮಾಧ್ಯಮಗಳಲ್ಲಿ ಪ್ರಶ್ನೆಗಳನ್ನು ನೀಡಲಾಗಿದೆ. ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ / ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದ ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಬೇಕು.
7. ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನಿಮಗೆ ನೀಡಿರುವ ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಕ್ರಮ ಸಂಖ್ಯೆ ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯ ಕ್ರಮ ಸಂಖ್ಯೆ ಒಂದೇ ಆಗಿದೆಯೇ ಗಮನಿಸುವುದು. ಬದಲಾವಣೆ ಇದ್ದಲ್ಲಿ ಅಭ್ಯರ್ಥಿಗಳು ತಕ್ಷಣ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ ಬೇರೆ ಪ್ರಶ್ನೆ ಪತ್ರಿಕೆಯನ್ನು ಪಡೆದುಕೊಳ್ಳುವುದು.
8. ಪ್ಲಾಸ್ಟಿಕ್ ಕವರ್‌ನಿಂದ ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನು ಜಾಗರೂಕತೆಯಿಂದ ಹೊರತೆಗೆದು ಮೊಹರನ್ನು ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಶೀಟನ್ನು ಹೊರತೆಗೆಯುವುದು. ನಂತರ ಓ.ಎಂ.ಆರ್. ಶೀಟಿನ ಕ್ರಮ ಸಂಖ್ಯೆ 1 ರಿಂದ 13 ರವರೆಗಿನ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡುವುದು. ಭರ್ತಿ ಮಾಡದೆ ಖಾಲಿ ಉಳಿದ ಸಂದರ್ಭದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರಾಗುವಿರಿ.



www.inyatrust.com

www.inyatrust.com



# PART-I

## Language – I : KANNADA

### ಪ್ರಥಮ ಭಾಷೆ ಕನ್ನಡ

### ಭಾಗ 'ಎ'

ಸೂಚನೆ : ಕೆಳಗಿನ ಪದ್ಯವನ್ನು ಓದಿ, 1 ರಿಂದ 7 ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಬೆಳಗುತಿರೆ ಬೆಳಕೆ

ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಶ್ರಾವಣದ ಶುಭದಿನದಿ ಎಮೆದೆರೆದ ಬೆಳಕೇ
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ||
ತೈಲ ತೀರಿದರುಂಟು ದುಡಿವವರ ಬೆಮರು
ಬತ್ತಿಯಿದೆ ಮೊತ್ತದಲಿ ಮಡಿದವರ ಕರುಳು
ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಉಸಿರು
ಮೀಸಲಿದೆ ಓ ಬೆಳಕೆ ಆ ಹುತಾತ್ಮರ ಮಡಿಲು
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಗಣತಂತ್ರದಟ್ಟಣೆಯ ವಿಸ್ತೃತದ ಗಂಧಕುಟಿ
ಜನಮನವೆ ವೇದಿಕೆಯು ವೈಜಯಂತಿ !
ಸಕಲ ಸೌಹಾರ್ದದಾ ಸಮಬಾಳು ನಿನ್ನ ಗುಡಿ
ಸತ್ಯ ಸೂರ್ಯನ ತೇಜ ನಿನದಾಯ್ತು ಪ್ರಣತಿ
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಬೆಳಗುತಿರು ಜಗದೊಡಲ ಚೆಲುವಿಕೆಯ ಚೇತನವೆ !
ಬೆಳಗುತಿರು ಕವಿ ಸವಿದ ಸುಸ್ಮೃತಿಯ ಸೌರಭವೆ !
ಬೆಳಗುತಿರು ರಾಷ್ಟ್ರಕನ ನಡೆಸುತಿಹ ಹೊಂಬೆಳಕೆ !
ಬೆಳಗುತಿರು ಅಭಿಜಾತ ಸ್ವಾತಂತ್ರ್ಯದಾ ಹಣತೆ !
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ||

1. ಬಿಡುಗಡೆಯ ಬೆಳಕಿನ ಜ್ಯೋತಿಯು ಹೀಗಿದೆ :
   (1) ಜನರ ವೇದಿಕೆಯ ವೈಜಯಂತಿಯಾಗಿ
   (2) ಗಣತಂತ್ರದಟ್ಟಣೆಯ ಗಂಧಕುಟಿಯಾಗಿ
   (3) ದಿನಕರನ ಬೆಳಕಿನ ಹೊಂಗಿರಣವಾಗಿ
   (4) ಸಕಲ ಸೌಹಾರ್ದದ ಸಮಬಾಳಾಗಿ

2. ಚೆಲುವಿಕೆಯ ಚೇತನವು ಕವಿಗೆ ಕಂಡಿದ್ದು
   (1) ಸತ್ಯ ಸೂರ್ಯನ ತೇಜದಲ್ಲಿ
   (2) ಪ್ರಪಂಚದ ಉದರದಲ್ಲಿ
   (3) ರಾಷ್ಟ್ರಭಕ್ತನ ಎದೆಯಲ್ಲಿ
   (4) ಜನಮನದ ಹೃದಯದಲ್ಲಿ



www.inyatrust.com

3. 'ಉತ್ತಮ ಕುಲದಲ್ಲಿ ಹುಟ್ಟಿದುದು' ಎಂಬರ್ಥವನ್ನು ನೀಡುವ ಪದ
   (1) ವೈಜಯಂತಿ (2) ಅಭಿಜಾತ (3) ಗಂಧಕುಟಿ (4) ಸೂರ್ಯತೇಜ
4. ಶ್ರಾವಣ ಮಾಸ ಕವಿಗೆ ಶುಭವಾಗಿ ಕಾಣಲು ಕಾರಣ :
   (1) ಸ್ವಾತಂತ್ರ್ಯದ ಹಣತೆ ಹೊತ್ತಿಕೊಂಡ ತಿಂಗಳಾಗಿರುವುದು
   (2) ಭಾರತದ ಬಿಡುಗಡೆಯ ಬೆಳಕು ಹೊತ್ತಿದ ತಿಂಗಳಾಗಿರುವುದು
   (3) ಆಷಾಡ ಮಾಸ ಕಳೆದು ಶ್ರಾವಣ ಬಂದಿರುವುದು
   (4) ಹೆಚ್ಚಿನ ಭಾರತೀಯ ಹಬ್ಬಗಳು ಈ ತಿಂಗಳು ಬಂದಿರುವುದು
5. ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ಕರುಳು ಕವಿಯ ದೃಷ್ಟಿಯಲ್ಲಿ ಹೀಗಿದೆ :
   (1) ಜನರ ಮನಸ್ಸಿನ ಬೆಳಕಾಗಿ (2) ದುಡಿದವರ ದೇಹದ ಬೆವರಾಗಿ
   (3) ಕೋಟಿ ಕೋಟಿ ಮಕ್ಕಳ ಉಸಿರಾಗಿ (4) ಸ್ವಾತಂತ್ರ್ಯದ ಹಣತೆಯ ಬತ್ತಿಯಾಗಿ
6. ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಉಸಿರು ಮೀಸಲಿದೆ ಓ ಬೆಳಕೆ ಆ ಹುತಾತ್ಮರ ಮಡಿಲು -- ಈ ಸಾಲುಗಳಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯವನ್ನು ಹೊಂದಿರುವ ಪದ :
   (1) ಉಸಿರು (2) ಹುತಾತ್ಮರ (3) ಬಟ್ಟಲಿಗೆ (4) ಮೀಸಲಿದೆ
7. ಈ ಕೆಳಗಿನ ಪದಗಳಲ್ಲಿ ಸಜಾತಿ ಸಂಯುಕ್ತಾಕ್ಷರದ ಪದ :
   (1) ವೈಜಯಂತಿ (2) ನಿನ್ನೊಡಲು (3) ಸುಸ್ಮೃತಿ (4) ನಿನದಾಯ್ತು

ಕೆಳಗೆ ನೀಡಿದ ಪರಿಚ್ಛೇದವನ್ನು ಓದಿ, ನಂತರ **8** ರಿಂದ **15** ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

'ಜನಪ್ರಿಯತೆ' ಎಂಬ ಪದ ಈಚೀಚೆಗೆ ಬಹಳ ಅನರ್ಥಕಾರಿಯಾಗುವಂತೆ ತೋರುತ್ತದೆ. 'ಜನಪ್ರಿಯತೆ' ಎಂದರೇನು ? ಆ ಜನರಾದರೂ ಯಾರು ? ಜನರೆಲ್ಲರೂ ಮೆಚ್ಚಿದ ಹೊರತು ಆ ಕಾವ್ಯ ಉತ್ತಮ ಕಾವ್ಯವಲ್ಲ ಎಂದು ಹೇಳುವುದಾದರೆ ಉತ್ತಮ ಕಾವ್ಯಗಳೇ ಅಸಾಧ್ಯ ಎಂದು ಹೇಳಬೇಕಾಗುತ್ತದೆ. ಉತ್ತಮ ಕಲಾಕಾರ್ಯದ ಸವಿಯನ್ನು ಆಸ್ವಾದಿಸುವ ಪುಣ್ಯವೂ ಸಾಮರ್ಥ್ಯವೂ ಪುಕ್ಕಟೆಯಾಗಿ ಬರುವುದಿಲ್ಲ. ಅದಕ್ಕೆ ಸಂಸ್ಕಾರವೂ ಅಭ್ಯಾಸವೂ ಎರಡೂ ಆವಶ್ಯಕ. ಪ್ರಕೃತಿ ಸೌಂದರ್ಯ-ಸೂರ್ಯ ಚಂದ್ರರ ಉದಯಾಸ್ತಗಳು, ವಸಂತಮಾಸದ ವನಶ್ರೀ, ಬತ್ತದ ಗದ್ದೆಗಳ ಪೈರುಪಚ್ಚೆ, ಮುಂಗಾರಿನ ಕರ್ಮುಗಿಲು, ಕಣಿವೆಗಳಲ್ಲಿ ಸಮುದ್ರ ಸರೋವರಗಳನ್ನು ವಿರಚಿಸುವ ಮಾಗಿಯ ಮಂಜಿನ ಮಾಯಾ ಮೋಹ, ಇತ್ಯಾದಿ ಸಹಸ್ರಾರು ದೃಶ್ಯಗಳು ದಿನ ದಿನವೂ ಜನಗಳ ಕಣ್ಣೆದುರು ಸುಳಿಯುತ್ತಿವೆ. ಆದರೆ ಎಷ್ಟು ಮಂದಿ ಅವುಗಳನ್ನು ವರ್ಡ್ಸ್‌ವರ್ತ್ ಕವಿಯಂತಾಗಲಿ, ವರ್ಣಶಿಲ್ಪಿ ವೆಂಕಟಪ್ಪನವರಂತಾಗಲಿ ಕಂಡುಣಲು ಸಮರ್ಥರಾಗಿದ್ದಾರೆ ? ಕಲೆಯನ್ನು ಸವಿಯಲು ಕಲಾದೃಷ್ಟಿ ಬೇಕು. ಕವಿ ತನ್ನ ಪ್ರತಿಭೆಗೆ, ತನ್ನ ಕಲ್ಪನೆಗೆ, ತನ್ನ ಭಾವಕ್ಕೆ ಗೋಚರವಾಗುವ ಸೃಷ್ಟಿಯ ರಹಸ್ಯ ಆನಂದ ಸೌಂದರ್ಯಗಳನ್ನು ಕೈಲಾದಮಟ್ಟಿಗೂ ತನ್ನ ಕೃತಿಯಲ್ಲಿ ಪ್ರತಿಬಿಂಬಿಸಲು, ನಿಹಿತಗೈಯಲು ಸಾಹಸ ಮಾಡುತ್ತಾನೆ ಅಂತಹ ಕೃತಿ ಹೊಸದಾಗಿರುವಾಗ ಜನರಿಗೆ ಅದು ರುಚಿಸದೆ ಹೋಗಬಹುದು ; ಅರ್ಥವಾಗದಿರಬಹುದು. ಆ ಕೃತಿಯ ಆಳಕ್ಕೆ ಮುಳುಗಲು, ಎತ್ತರಕ್ಕೆ ಏರಲು ಅವರಿಗೆ ಅಸಾಧ್ಯವಾಗಬಹುದು. ಆಗ ಅವರು ಅದನ್ನು ತಿರಸ್ಕರಿಸುವುದೂ ಹೀಯಾಳಿಸುವುದೂ ಸ್ವಾಭಾವಿಕ. ಹಾಗೆಂದು ಆ ಕಲಾಕೃತಿಯನ್ನೇ ಅಲ್ಲವೆಂದು ಅಲ್ಲಗಳೆಯುವುದಕ್ಕೆ ಆಗುತ್ತದೆಯೆ ? ನೂತನವಾದುದರಲ್ಲಿ ಜನರಿಗೆ ಸಂಶಯ ಹೆಚ್ಚು. ಆ ಸಂಶಯ ಮೊದಮೊದಲು ಔದಾಸೀನ್ಯ ತಿರಸ್ಕಾರಗಳ ರೂಪದಲ್ಲಿ ತೋರುತ್ತದೆ. ಎಲ್ಲಿಯೋ ಹಲಕೆಲವು ಕಲಾವಿದರಿಗೆ ಮಾತ್ರ ಅದರ ಮಹತ್ತು ತಿಳಿಯುತ್ತದೆ.

8. ಜನರು ಒಂದು ಕೃತಿಯನ್ನು ತಿರಸ್ಕರಿಸಲು ಕಾರಣ :
   (1) ಕೃತಿಯು ಅಸ್ವಾಭಾವಿಕತೆಯಿಂದ ಕೂಡಿರುವುದು
   (2) ಕೃತಿಯ ಎತ್ತರಕ್ಕೆ ಏರಲು ಜನರಿಗೆ ಸಾಧ್ಯವಾಗದಿರುವುದು
   (3) ಜನರಿಗೆ ಕಲಾ ದೃಷ್ಟಿ ಇಲ್ಲದಿರುವುದು
   (4) ಜನರಿಗೆ ಕವಿಯ ಕಲ್ಪನೆ ಮತ್ತು ಪ್ರತಿಭೆ ಅರ್ಥವಾಗದಿರುವುದು



www.inyatrust.com

9. ಉತ್ತಮ ಕಲಾಕಾರ್ಯದ ಸವಿಯನ್ನು ಸವಿಯುವ ಸಾಮರ್ಥ್ಯ ಬರಬೇಕಾದರೆ :
   (1) ಬುದ್ಧಿವಂತಿಕೆ ಇರಬೇಕು
   (2) ಕಲಾಭಿವ್ಯಕ್ತಿ ಸಾಮರ್ಥ್ಯ ಇರಬೇಕು
   (3) ನಿರಂತರ ಅಭ್ಯಾಸ ಅವಶ್ಯಕ
   (4) ಆಸ್ವಾದಿಸುವ ಗುಣ ಅವಶ್ಯಕ

10. ಜನ ಸಾಮಾನ್ಯರ ನಡುವೆ ಕವಿ ವಿಶೇಷವಾಗಿ ಕಾಣಲು ಕಾರಣ :
   (1) ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವುದು
   (2) ಪ್ರಕೃತಿಯ ಆಗು ಹೋಗುಗಳಿಗೆ ತಕ್ಷಣ ಸ್ಪಂದಿಸುವುದು
   (3) ಪ್ರಕೃತಿ ಸೌಂದರ್ಯವನ್ನು ತನ್ನ ಕೃತಿಯಲ್ಲಿ ಪ್ರತಿಬಿಂಬಿಸುವುದು
   (4) ಕಲೆಯನ್ನು ಸವಿಯುವ ಕಲಾದೃಷ್ಟಿ ಇರುವುದು

11. ಈ ಕೆಳಗಿನ 'ಎ' ಮತ್ತು 'ಬಿ' ಪಟ್ಟಿಗೆ ಸರಿ ಹೊಂದುವ ಸೂಚಿಯನ್ನು ಗುರುತಿಸಿ.

| | 'ಎ' | | 'ಬಿ' |
|---|---|---|---|
| a. | ಪ್ರಥಮ ವಿಭಕ್ತಿ | ಅ | ಕೃತಿಯಿಂದ |
| b. | ದ್ವಿತೀಯ ವಿಭಕ್ತಿ | ಆ | ಎತ್ತರಕ್ಕೆ |
| c. | ತೃತೀಯ ವಿಭಕ್ತಿ | ಇ | ಜನಪ್ರಿಯತೆಯು |
| d. | ಚತುರ್ಥಿ ವಿಭಕ್ತಿ | ಈ | ಕೃತಿಯಲ್ಲಿ |
| | | ಉ | ಕಲಾಕೃತಿಯನ್ನು |

   (1) a- ಉ, b- ಅ, c- ಇ, d- ಆ
   (2) a- ಇ, b- ಉ, c- ಆ, d- ಈ
   (3) a- ಇ, b- ಉ, c- ಈ, d- ಆ
   (4) a- ಇ, b- ಉ, c- ಅ, d- ಆ

12. ಈ ಕೆಳಗಿನ ಪದಗಳಲ್ಲಿ ಶುದ್ಧರೂಪ ಪದಗಳನ್ನು ಹೊಂದಿರುವ ಸೂಚಿ :
   a. ಹಾರ್ದಿಕ b. ಉಚ್ಚಾರಣೆ c. ಕೃತಿ d. ಕಲಾದೃಷ್ಟಿ
   (1) a, b, c
   (2) a, b, d
   (3) a, c, d
   (4) b, d, a

13. ಉತ್ತಮ ಕಾವ್ಯದ ಲಕ್ಷಣ :
   (1) ಜನಪ್ರಿಯವಾಗಿರುವುದು
   (2) ಜನಪ್ರಿಯವಾಗಿಲ್ಲದಿರುವುದು
   (3) ಸೃಷ್ಟಿಯ ರಹಸ್ಯ ಮತ್ತು ಸೌಂದರ್ಯವನ್ನು ಪ್ರತಿಬಿಂಬಿಸಿರುವುದು
   (4) ಜನಸಾಮಾನ್ಯರೆಲ್ಲರಿಗೂ ಅರ್ಥೈಸಲು ಯಶಸ್ವಿ ಆಗಿರುವುದು

14. 'ಸೃಷ್ಟಿಯ ರಹಸ್ಯ' ಈ ಪದದಲ್ಲಿನ ಅಕ್ಷರಗಳನ್ನು ಬಿಡಿಸಿ ಬರೆದಾಗ :
   (1) ಸ್ + ಋ + ಷ್ + ಟ್ + ಇ + ಯ್ + ಅ + ರ್ + ಅ + ಹ್ + ಅ + ಸ್ + ಯ್ + ಅ
   (2) ಸ್ + ಋ, ಷ್ + ಟ್ + ಇ, ಯ್ + ಅ, ರ್ + ಅ, ಹ್ + ಅ, ಸ್ + ಯ್ + ಅ
   (3) ಸ್ + ರ್ + ಅ, ಷ್ + ಟ್ + ಇ, ಯ್ + ಅ, ರ್ + ಅ, ಹ್ + ಅ, ಸ್ + ಯ್ + ಅ
   (4) ಸ್ + ೠ + ಷ್ + ಟ್ + ಇ + ಯ್ + ಅ, ರ್ + ಅ + ಹ್ + ಅ + ಸ್ + ಯ್ + ಅ

15. ಕವಿ ತನ್ನ ಕಾವ್ಯದಲ್ಲಿ ಇದನ್ನು ಪ್ರತಿಬಿಂಬಿಸಲು ಪ್ರಯತ್ನಿಸುತ್ತಾನೆ.
   (1) ಪ್ರಕೃತಿಯ ವೈರುದ್ಯಗಳನ್ನು
   (2) ತನ್ನ ಕಷ್ಟ-ಕಾರ್ಪಣ್ಯಗಳನ್ನು
   (3) ಜನರಿಗೆ ಅರ್ಥವಾಗುವ ಪ್ರಕೃತಿಯ ಸೌಂದರ್ಯವನ್ನು
   (4) ಪ್ರಕೃತಿಯ ಸೌಂದರ್ಯ, ರಹಸ್ಯಗಳನ್ನು



www.inyatrust.com

## ಭಾಗ 'ಬಿ' ಭಾಷಾಭಿವೃದ್ಧಿಯ ಬೋಧನಾ ಶಾಸ್ತ್ರ

16. ಒಂದು ಭಾಷೆಯನ್ನು ಕಲಿಯುವ ಸರಿಯಾದ ಕ್ರಮ :
    (1) ಮಾತನಾಡುವುದು-ಆಲಿಸುವುದು-ಓದುವುದು-ಬರೆಯುವುದು.
    (2) ಆಲಿಸುವುದು-ಓದುವುದು-ಮಾತನಾಡುವುದು-ಬರೆಯುವುದು.
    (3) ಬರೆಯುವುದು-ಓದುವುದು-ಮಾತನಾಡುವುದು-ಆಲಿಸುವುದು.
    (4) ಆಲಿಸುವುದು-ಮಾತನಾಡುವುದು-ಓದುವುದು-ಬರೆಯುವುದು.

17. ಮಕ್ಕಳು ಸಹಜವಾಗಿ ಭಾಷೆಯನ್ನು ಇದರ ಮೂಲಕ ಕಲಿಯುತ್ತಾರೆ :
    (1) ಅನುಕರಣೆಯ ಮೂಲಕ
    (2) ಆಲಿಸುವ ಮೂಲಕ
    (3) ಮಾತನಾಡುವ ಮೂಲಕ
    (4) ಅರ್ಥೈಸಿಕೊಳ್ಳುವ ಮೂಲಕ

18. ಮಕ್ಕಳ ಕಲಿಕೆ ಬಲಗೊಳ್ಳುವುದನ್ನು ಪ್ರತಿಪಾದಿಸುವ ತತ್ವ (ನಿಯಮ)
    (1) ಅನುಕರಣ ನಿಯಮ
    (2) ಅಭ್ಯಾಸ ನಿಯಮ
    (3) ಅನುಕ್ರಮಣಿಕೆ ನಿಯಮ
    (4) ಸಿದ್ಧತಾ ನಿಯಮ

19. ಒಂದು ಭಾಷೆಯನ್ನು ಕಲಿಯಬೇಕಾದರೆ ಮೊದಲು ನಾವು :
    (1) ಭಾಷೆಯ ಅಕ್ಷರಗಳನ್ನು ಗುರುತಿಸುವಂತಾಗಬೇಕು.
    (2) ಭಾಷೆಯ ವ್ಯಾಕರಣವನ್ನು ಕಲಿತಿರಬೇಕು.
    (3) ಭಾಷೆಯನ್ನಾಡುವ ಜನರ ನಡುವೆ ನಾವು ಜೀವಿಸಬೇಕು.
    (4) ಭಾಷೆಯ ಧ್ವನಿಗಳನ್ನು ಗುರುತಿಸುವಂತಾಗಬೇಕು.

20. ಉತ್ತಮ ಮಾತುಗಾರಿಕೆಯ ಪ್ರಧಾನ ಲಕ್ಷಣ :
    (1) ಧ್ವನಿ ಸಂಕೇತಗಳ ಮೂಲಕ ಪ್ರಕಟಗೊಂಡಿರಬೇಕು.
    (2) ಧ್ವನಿ, ಅರ್ಥ, ಭಾವನೆಗಳು ಸಮನ್ವಯಗೊಂಡಿರಬೇಕು.
    (3) ಶಬ್ದ, ಭಾವನೆಗಳು ಸಮನ್ವಯಗೊಂಡಿರಬೇಕು.
    (4) ಶಬ್ದಗಳನ್ನು ಬಳಸುವ ಕೌಶಲ ಹೊಂದಿರಬೇಕು.

21. ಕ್ರಿಯಾತ್ಮಕ ವ್ಯಾಕರಣ ಎಂದರೆ :
    (1) ವ್ಯಾಕರಣವನ್ನು ಪ್ರತ್ಯೇಕ ಅವಧಿಗಳಲ್ಲಿ ಕಲಿಸುವುದು.
    (2) ಸಾಂಪ್ರದಾಯಿಕ ಪದ್ಧತಿಯಲ್ಲಿ ವ್ಯಾಕರಣವನ್ನು ಕಲಿಸುವುದು.
    (3) ಕೆಲವು ಅವಧಿಗಳನ್ನು ವ್ಯಾಕರಣಕ್ಕೆ ಮೀಸಲಿಟ್ಟು ಕಲಿಸುವುದು.
    (4) ಕಲಿಕಾ ಪ್ರಕ್ರಿಯೆಯೊಂದಿಗೆ ವ್ಯಾಕರಣವನ್ನು ಸಮ್ಮಿಳಿತಗೊಳಿಸಿ ಕಲಿಸುವುದು.

22. ಕುರುಕ್ಷೇತ್ರದಲ್ಲಿ ಕೌರವರು ಪಾಂಡವರೊಡನೆ ಯುದ್ಧ ಮಾಡಿ 'ಸರ್ವನಾಶ' ಹೊಂದಿದರು. ಗೆರೆ ಎಳೆದ ಪದದ ಅರ್ಥ ಕೊಡುವ ನುಡಿಗಟ್ಟು :
    (1) ಮೂಗಿನ ತುದಿಗೆ ಸುಣ್ಣ ಹಚ್ಚು
    (2) ಶಸ್ತ್ರ ನೆಲಕ್ಕೆ ಹಾಕು
    (3) ಏಳು ಹನ್ನೊಂದಾಗು
    (4) ನೆಲಸಮ ಮಾಡು



www.inyatrust.com

23. ಭಾಷಾ ಬೋಧನೆಯ ಪ್ರಧಾನ ಉದ್ದೇಶ :
    (1) ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು
    (2) ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು
    (3) ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು
    (4) ಆಲಿಸುವ, ಮಾತನಾಡುವ ಸಾಮರ್ಥ್ಯ ಬೆಳೆಸುವುದು

24. ಒಂದನೆಯ ತರಗತಿಯ ಅಂತ್ಯದಲ್ಲಿ ಮಗು ಗ್ರಹಿಸಿ, ಅರ್ಥೈಸಿಕೊಳ್ಳಬೇಕಾದ ಒಟ್ಟು ಪದಗಳು :
    (1) ಸುಮಾರು ಒಂದು ಸಾವಿರ
    (2) ಸುಮಾರು ಒಂದೂವರೆ ಸಾವಿರ
    (3) ಸುಮಾರು ಎರಡು ಸಾವಿರ
    (4) ಸುಮಾರು ಎರಡೂವರೆ ಸಾವಿರ

25. ಭಾಷಾ ಪ್ರಯೋಗಶಾಲೆ ಎಂದು ಇದನ್ನು ಕರೆಯುತ್ತಾರೆ.
    (1) ಭಾಷೆಯನ್ನು ಪ್ರಯೋಗಕ್ಕೆ ಒಳಪಡಿಸುವ ಕೊಠಡಿ
    (2) ವಿದ್ಯುನ್ಮಾನ ಬೋಧನೋಪಕರಣಗಳಿಂದ ಕೂಡಿದ ಕೊಠಡಿ
    (3) ವಿದ್ಯಾರ್ಥಿ-ಶಿಕ್ಷಕರನ್ನೊಳಗೊಂಡ ಭಾಷಾ ಕೊಠಡಿ
    (4) ಕಂಪ್ಯೂಟರ್, ಟಿ.ವಿ, ರೇಡಿಯೋ ಹೊಂದಿರುವ ತರಗತಿ ಕೊಠಡಿ

26. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪ್ರಧಾನ ಉದ್ದೇಶ :
    (1) ಮಕ್ಕಳ ಫಲಿತಾಂಶ ನಿರ್ಧರಿಸುವುದು
    (2) ಮಕ್ಕಳ ಪಠ್ಯ ಸಾಧನೆಯನ್ನು ಗುರುತಿಸುವುದು
    (3) ಮಕ್ಕಳನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು
    (4) ಮಕ್ಕಳ ಕಲಿಕೆಯನ್ನು ಶ್ರೇಣೀಕರಿಸುವುದು

27. 'ತಲೆದೂಗು' ಈ ನುಡಿಗಟ್ಟಿನ ಅರ್ಥ
    (1) ಮೆಚ್ಚುಗೆ ಸೂಚಿಸು
    (2) ತಲೆಯನ್ನು ತೂಗು
    (3) ವಿರೋಧ ವ್ಯಕ್ತ ಪಡಿಸು
    (4) ಒಪ್ಪಿಗೆ ಸೂಚಿಸು

28. 3 ನೇ ತರಗತಿಯ ವಿದ್ಯಾರ್ಥಿಯೊಬ್ಬ 4 ನೇ ತರಗತಿಗೆ ಬಂದಾಗ ಅವನಲ್ಲಿ ನಿರೀಕ್ಷಿತ ಸಾಮರ್ಥ್ಯಗಳ ಕಲಿಕೆಯಾಗದಿದ್ದಲ್ಲಿ, ಕೊರತೆಗಳನ್ನು ತುಂಬಲು ಮಾಡಬಹುದಾದ ಚಟುವಟಿಕೆ :
    (1) ಪರಿಹಾರ ಬೋಧನೆ ಮಾಡುವುದು
    (2) ಮರುಬೋಧನೆ ಮಾಡುವುದು
    (3) ಕಂಠಪಾಠ ಮಾಡಿಸುವುದು
    (4) ಹಿಂದಿನ ತರಗತಿಗೆ ಕಳುಹಿಸುವುದು

29. ಭಾಷಾ ಬೋಧನೆಗೆ ಉತ್ತಮ ಕಲಿಕಾ-ಬೋಧನೋಪಕರಣಗಳು :
    (1) ದೃಕ್ ಉಪಕರಣಗಳು
    (2) ಶ್ರವಣೋಪಕರಣಗಳು
    (3) ಚಾರ್ಟುಗಳು
    (4) ದೃಕ್-ಶ್ರವಣೋಪಕರಣಗಳು

30. ಯಶಸ್ವಿ ತರಗತಿ ಪ್ರಕ್ರಿಯೆಗೆ ಸೂಕ್ತವಾದ ಚಟುವಟಿಕೆ ಹಂತಗಳ ಕ್ರಮಬದ್ಧ ಜೋಡಣೆ :
    a. ಕಲಿಕಾಪೂರಕ ಹಂತ
    b. ಕಲಿಕಾಂಶ ಹಂತ
    c. ಅಭ್ಯಾಸ ಹಂತ
    d. ಬಳಕೆ ಹಂತ
    e. ಪೂರ್ವಸಿದ್ಧತಾ ಹಂತ
    f. ಮೌಲ್ಯಮಾಪನ ಹಂತ
    (1) a, b, c, e, d, f
    (2) e, a, b, c, d, f
    (3) a, e, b, c, d, f
    (4) e, a, b, d, c, f



www.inyatrust.com

www.inyatrust.com



## Language – II
## ENGLISH

(Questions **31 – 38**) :

Read the following passage and choose the most appropriate alternative to the questions that follow :

Some years ago, I had the privilege of meeting the world's oldest man. At least, he said he was. And he was so dogmatic about it that the promoters of a cartoon strip that specialized in unbelievable oddities brought the old man up to New York from his native Columbia to have him examined by a team of doctors at the Cornell Medical Centre. He was an Indian, he was four feet four inches tall; he had an alligator-hide complexion and a tendency to swing to his right whenever he was passed from one medico to another. He said he was 167, born the same year as the American Constitution. When the name of George Washington was suggested to him to help him fix his generation, he said he remembered the man well. But he resented coming all the way to New York. He wanted to be left alone to go about his business, which at that time was the business of looking for a sixth wife to comfort him in his approaching old age.

**31.** The old man was dogmatic about the fact that he
(1) was four feet four inches tall.
(2) was the world's oldest living man.
(3) belonged to Columbia.
(4) had an alligator-hide complexion.

**32.** The cartoon-strip creators got interested in him because
(1) he was a comical creature.
(2) they wanted to feature him in a cartoon strip.
(3) a person surviving at that age was odd and unbelievable.
(4) he had the tendency of swinging to his right.

**33.** The old man claimed that the Americans gave themselves a Constitution
(1) before he was born.
(2) in the year of George Washington's birth.
(3) two centuries ago.
(4) in the same year as he was born.



www.inyatrust.com

www.inyatrust.com



34. George Washington's name was mentioned to the old man to

(1) teach him a bit of history.

(2) know whether he had any personal contacts with Washington.

(3) make fun of his advanced age.

(4) determine his age.

35. The old man did not like being brought to New York because

(1) at that time he was busy looking for a sixth wife.

(2) he didn't like travelling much.

(3) he didn't like New York.

(4) he preferred to be left alone in his native village.

36. But he resented coming all the way to New York

The antonym for the word 'resented' is

(1) indignant (2) opposed

(3) accepted (4) tolerated

37. The synonym for the word 'dogmatic' is

(1) doubtful (2) authoritative

(3) indecisive (4) formal

38. I had the privilege of meeting the world's oldest man

The word 'privilege' means

(1) restriction (2) permission

(3) inhibition (4) advantage



www.inyatrust.com

www.inyatrust.com



**(Questions 39 – 45) :**

Read the following passage and choose the most appropriate alternative to the questions that follow :

Vacations were once the prerogative of the privileged few, even as late as the 19th Century. Now vacations are considered the right of all, except for such unfortunate masses as in China, for whom life, except for sleep and brief periods of rest, is uninterrupted toil.

Vacations are more necessary now than before because the average life is well rounded and has become increasingly departmentalised. The idea of vacations, as we conceive it must be incomprehensive to primitive people. Rest of some kind has of course always been a part of the rhythm of human life but earlier they did not find it necessary to organise it in the way that modern man has done. Holidays and feast days were sufficient. With modern man's increasing tensions and the useless quality of so much of his work, this break in the year's routine became steadily more necessary. Vacations became necessary for the purpose of renewal and repair.

**39.** The author's main purpose in this passage is to
(1) explore the history of vacations.
(2) contrast holidays and festive occasions with vacation.
(3) tell why vacations have become more common.
(4) demonstrate that vacations are not really necessary.

**40.** According to the passage, we need vacations now more than ever because we have
(1) a more careful nature.
(2) much more free time.
(3) little diversity in our work.
(4) a higher standard of living.

**41.** As used in the passage the word 'prerogative' means
(1) privilege
(2) hope
(3) habit
(4) request

**42.** The correct question tag for the sentence given below is
The life became increasingly departmentalised.
(1) doesn't it ?
(2) don't they ?
(3) didn't they ?
(4) didn't it ?

**43.** The Chinese are referred to as 'unfortunate masses' because
(1) they enjoy uninterrupted vacations.
(2) they get time only for sleep and brief periods of rest.
(3) they have no vacations.
(4) they have no rights at all.



www.inyatrust.com

44. Noun form of the word 'except' is
(1) exception
(2) excepting
(3) except
(4) excepted

45. The contemporary attitude towards vacations is best expressed by the proverb
(1) A penny saved is a penny earned
(2) The devil finds work for idle hands
(3) Many hands make light work
(4) All work and no play makes Jack a dull boy

46. Teacher encouraging the students to write limericks, short stories etc., as an extension of language teaching develops
(1) Communicative writing
(2) Professional writing
(3) Creative writing
(4) Academic writing

47. The convention 'F' in an English dictionary indicates
(1) uses confined to poetry.
(2) that is found chiefly in literature.
(3) that are restricted to written English.
(4) use that is normally restricted to formal English.

48. A good speaker of English speaks
(1) in a universally intelligible way.
(2) deliberately and confidently.
(3) fast and fluently.
(4) slowly and puts stress on every word.

49. He has met with an accident. The doctors have treated him and they have shifted him to the ward.
Through these sentences the teacher is trying to teach the language item
(1) Simple Present Tense
(2) Present Perfect Tense
(3) Present Continuous Tense
(4) Present Perfect Continuous Tense

50. One of the reasons for the failure in communication is
(1) poor attention.
(2) weak in memorisation.
(3) poor listening.
(4) lack of interest.

51. Including a mini-dictionary at the end of the English text book develops
(1) speaking skill
(2) reference skill
(3) communicative skill
(4) listening skill



www.inyatrust.com

www.inyatrust.com



52. For a teacher to teach grammar this is not a criteria
(1) The pupil's age
(2) Stage of learning
(3) Aims of learning
(4) The size of the class

53. A good language use relies greatly on
(1) spelling
(2) thinking
(3) vocabulary
(4) intelligence

54. One of the best ways to explain the 'Content words' is through
(1) meaningful situation
(2) repetition
(3) memorisation
(4) flash cards

55. The plan for Remedial Teaching is usually based on
(1) capacity of the teacher.
(2) students performance in tests and exams.
(3) interest of the students.
(4) availability of time.

56. Reading a road map or an airline schedule develops micro skills like
(1) Pronunciation
(2) Expression
(3) Critical thinking
(4) Scanning

57. I have learnt there poetries
The error in the above sentence is in the use of
(1) Verb
(2) Pronoun
(3) Noun
(4) Adjective

58. Copying
Dictation
Transforming sentences
Constructing sentences
The above activities improve
(1) Writing
(2) Grammar
(3) Speaking
(4) Handwriting

59. He was taken aback by his own performance.
The idiom 'taken aback' means
(1) happy
(2) surprised
(3) angry
(4) sad

60. (a) fasten
(b) whistle
(c) listen
(d) castle
The above given set of words can be used to teach
(1) diphthongs
(2) vowel sounds
(3) rhyming words
(4) silent letters



www.inyatrust.com

www.inyatrust.com



## PART – III

## CHILD DEVELOPMENT AND PEDAGOGY

61. ಮಗುವಿನಲ್ಲಿ ವಿಕಾಸದ ಬೆಳವಣಿಗೆಗಳು ಕಂಡು ಬರಲು ಕಾರಣ
    (1) ಅನುವಂಶೀಯ ಕಾರಣಗಳು
    (2) ಪರಿಸರದ ಅಂಶಗಳು
    (3) ಅನುವಂಶೀಯ ಮತ್ತು ಪರಿಸರದ ಅಂಶಗಳ ಅಂತರ್‌ಕ್ರಿಯೆ
    (4) ಪೌಷ್ಠಿಕ ಅಂಶಗಳು

62. ಪಿಯಾಜೆಯವರ ಪ್ರಕಾರ ಜ್ಞಾನಾತ್ಮಕ ವಿಕಾಸದ ಪ್ರಕ್ರಿಯೆಯಲ್ಲಿ ಪ್ರಾಕಲ್ಪನೆ ರೂಪಿಸುವ ಮತ್ತು ಪ್ರಯೋಗ ಮಾಡುವ ಸಾಮರ್ಥ್ಯ ಇಲ್ಲಿ ಕಾಣಬರುತ್ತದೆ.
    (1) ಸಂವೇದನಾ ಗತಿ ಹಂತ
    (2) ಮೂರ್ತ ಕಾರ್ಯಗಳ ಹಂತ
    (3) ಔಪಚಾರಿಕ ಕಾರ್ಯಗಳ ಹಂತ
    (4) ಕಾರ್ಯ ಪೂರ್ವ ಹಂತ

63. ಬೌದ್ಧಿಕ ಕೊರತೆ ಕಂಡು ಬರುವ ಬುದ್ಧಿಶಕ್ತಿ ಸೂಚ್ಯಾಂಕದ ವ್ಯಾಪ್ತಿ
    (1) 0 – 25
    (2) 0 – 30
    (3) 25 – 50
    (4) 0 – 70

64. ಬುದ್ಧಿಶಕ್ತಿಯ ಮೂರು ಆಯಾಮಗಳ ಮಾದರಿಯನ್ನು ರೂಪಿಸಿದವನು
    (1) ಕೆಟಲ್
    (2) ಥರ್ಸ್ಟೋನ್
    (3) ಗಿಲ್ ಫೋರ್ಡ್
    (4) ಟರ್ಮನ್

65. ಬುದ್ಧಿಶಕ್ತಿ ಎನ್ನುವುದು
    (1) ಭಾವನಾತ್ಮಕ ಸಾಮರ್ಥ್ಯ
    (2) ಆಲೋಚನಾ ಸಾಮರ್ಥ್ಯ
    (3) ಜ್ಞಾನಾತ್ಮಕ ಸಾಮರ್ಥ್ಯ
    (4) ಚಾಲನಾ ಸಾಮರ್ಥ್ಯ

66. ಒಬ್ಬ ಬುದ್ಧಿಮಾಂದ್ಯ ಮಗುವಿನ ಅವಧಾನ ಅವಧಿಯು ಕಡಿಮೆ ಇರುತ್ತದೆ. ಏಕೆಂದರೆ
    (1) ಮಗುವನ್ನು ಗಮನಿಸಲು ಶಿಕ್ಷಕರಿಗೆ ಸ್ವಲ್ಪ ಸಮಯ ಲಭ್ಯವಿರುವುದು
    (2) ಮಗು ಬಹಳ ತುಂಟನಾಗಿರುವುದು
    (3) ಅವನ ಸ್ನೇಹಿತರು ಅಡ್ಡಿವಹಿಸುವರು
    (4) ಹುಟ್ಟಿನಿಂದ ಬಂದ ಗುಣಗಳು

67. ಒಳನೋಟ ಕಲಿಕೆಯ ಮುಖ್ಯವಾದ ಗುಣಲಕ್ಷಣವು
    (1) ತಕ್ಷಣ ವಿಚಾರ ಹೊಳೆಯುವುದು
    (2) ಸ್ವಯಂ ಕಲಿಕೆ
    (3) ಸಂಕಷ್ಟ ಪರಿಹರಿಸುವುದು
    (4) ದೃಷ್ಟಿಕೋನ ವೃದ್ಧಿಪಡಿಸುವುದು



www.inyatrust.com

www.inyatrust.com



68. ಪ್ರತಿಭಾವಂತ ಮಕ್ಕಳು ಯಾವಾಗಲೂ ಎದುರು ನೋಡುವುದು

(1) ಪ್ರಯೋಗಾಲಯಗಳಲ್ಲಿ ಕೆಲಸ ಮಾಡುವುದು

(2) ಗ್ರಂಥಾಲಯಗಳಲ್ಲಿ ಅಭ್ಯಸಿಸುವುದು

(3) ಇತರರನ್ನು ಗೆಲ್ಲಲು ಅವಕಾಶಗಳು

(4) ವಿನೂತನ ಕಾರ್ಯಗಳು

69. ಒಬ್ಬ ಹುಡುಗನ ಮಾನಸಿಕ ವಯಸ್ಸು (M.A.) 8 ಹಾಗೂ ದೈಹಿಕ ವಯಸ್ಸು (C.A.) 10 ಆಗಿದ್ದರೆ, ಆತನ ಬುದ್ಧಿ ಸೂಚ್ಯಾಂಕವು (I.Q)

(1) 125 (2) 100

(3) 80 (4) 120

70. ಒಬ್ಬ ಬಾಲಕಿ ಸಂಗೀತದಲ್ಲಿ ಪ್ರಾವಿಣ್ಯತೆ ಪಡೆಯುವುದು ಇದಕ್ಕೆ ಉದಾಹರಣೆಯಾಗಿದೆ.

(1) ಧನಾತ್ಮಕ ಮನೋಭಾವ (2) ಕುತೂಹಲ

(3) ಆಂತರಿಕ ಅಭಿಪ್ರೇರಣೆ (4) ಆಸಕ್ತಿ

71. ಭಾಷಾ ಬೆಳವಣಿಗೆಯಲ್ಲಿ ಮೌಖಿಕ ಅಭಿವ್ಯಕ್ತಿ ಮತ್ತು ಒತ್ತು ಕೊಡುವಿಕೆಯ ಅಂಶಗಳನ್ನು ಈ ಮೂಲಕ ಗಳಿಸಬಹುದಾಗಿದೆ.

(1) ಒಗ್ಗೂಡಿಸುವಿಕೆ (2) ಒಳನೋಟ

(3) ಅನುಬಂಧಿತತೆ (4) ಅನುಕರಣೆ

72. ಅಭ್ಯಾಸ ನಿಯಮದಲ್ಲಿ "ಇತರ ವಸ್ತುಗಳು ಸಮನಾಗಿದ್ದು" ಎಂಬ ನುಡಿಗಟ್ಟು ಇವುಗಳಿಗೆ ಸಂಬಂಧ ಪಟ್ಟಿದೆ.

(1) ಪರಿಣಾಮ ಮತ್ತು ಸಿದ್ಧತೆ (2) ಉಪಯೋಗ ಮತ್ತು ನಿರುಪಯೋಗ

(3) ತಾಜ ಮತ್ತು ತೀವ್ರ (4) ಪ್ರಚೋದನೆ ಮತ್ತು ಪ್ರತಿಕ್ರಿಯೆ

73. ಪರಿಣಾಮ ನಿಯಮವು ಒತ್ತಿ ಹೇಳುವುದು

(1) ಬಹುಮಾನಗಳನ್ನು ಮಾತ್ರ (2) ಶಿಕ್ಷೆಗಳನ್ನು ಮಾತ್ರ

(3) ಬಹುಮಾನ ಮತ್ತು ಶಿಕ್ಷೆ ಎರಡನ್ನೂ (4) ಬಹುಮಾನ ಮತ್ತು ಶಿಕ್ಷೆ ಎರಡೂ ಅಲ್ಲ

74. ಮಾನಸಿಕ ಕೌಶಲ್ಯ ಮತ್ತು ತಿಳುವಳಿಕೆಯ ಪರೀಕ್ಷೆಯನ್ನು ಮಾಡುವಲ್ಲಿ ಮೌಲ್ಯವಾದ ಪರೀಕ್ಷೆ

(1) ಬಹು ಆಯ್ಕೆ ಮಾದರಿ ಪರೀಕ್ಷೆಗಳು (2) ಹೊಂದಿಸಿ ಬರೆಯುವ ಪರೀಕ್ಷೆಗಳು

(3) ಪ್ರಬಂಧ ಮಾದರಿ ಪರೀಕ್ಷೆಗಳು (4) ಪೂರ್ಣಗೊಳಿಸುವ ಮಾದರಿ ಪರೀಕ್ಷೆಗಳು

75. ವಸ್ತುನಿಷ್ಠ ಮಾದರಿ ಪರೀಕ್ಷೆಗಳು ಲಘು ಮಾದರಿ ಪರೀಕ್ಷೆಗಳಿಗಿಂತ ಹೆಚ್ಚು ಆದ್ಯತೆ ಪಡೆದಿವೆ ಏಕೆಂದರೆ

(1) ವ್ಯಕ್ತಿನಿಷ್ಠತೆಯನ್ನು ಕಡಿಮೆ ಮಾಡುತ್ತವೆ (2) ರಚನೆ ಮಾಡುವಲ್ಲಿ ಸುಲಭವಾಗಿದೆ

(3) ವಿದ್ಯಾರ್ಥಿಗಳು ಇಷ್ಟಪಡುತ್ತಾರೆ (4) ಸುಲಭವಾಗಿ ಹೆಚ್ಚು ಅಂಕ ಗಳಿಸಬಹುದು



www.inyatrust.com

76. ಒಬ್ಬ ವ್ಯಕ್ತಿ ತನ್ನ ನ್ಯೂನತೆಗಳನ್ನು ಇತರರ ಮೇಲೆ ವರ್ಗಾಯಿಸಲು ಪ್ರಯತ್ನಿಸುವ ತಂತ್ರ
(1) ಧಮನ
(2) ಹಗಲುಗನಸು ಕಾಣುವಿಕೆ
(3) ಪ್ರಕ್ಷೇಪಣೆ
(4) ತರ್ಕ ಸಮ್ಮತವಾಗಿಸುವಿಕೆ

77. ಕಾರ್ಯಸರಣಿ ಬೋಧನೆಯು ಈ ತತ್ವಗಳನ್ನು ಅನ್ವಯಿಸಿ ರೂಪಿಸಲ್ಪಟ್ಟಿದೆ.
(1) ಪ್ರಯತ್ನ ಮತ್ತು ಪ್ರಮಾದ ಕಲಿಕೆ
(2) ಸೋಪಾಧಿಕ ಅನುಬಂಧಿತ ಕಲಿಕೆ
(3) ಕ್ರಿಯಾಜನ್ಯ ಕಲಿಕೆ
(4) ಒಳನೋಟ ಕಲಿಕೆ

78. ಕಕ್ಷಿ ಕೇಂದ್ರಿತ ಆಪ್ತ ಸಲಹೆ ವಿಧಾನವು ಹೀಗೂ ಕರೆಯಲ್ಪಟ್ಟಿದೆ
(1) ನಿರ್ದೇಶಿತ ಆಪ್ತ ಸಲಹೆ
(2) ಅನಿರ್ದೇಶಿತ ಆಪ್ತ ಸಲಹೆ
(3) ಮಿಶ್ರ ಆಪ್ತ ಸಲಹೆ
(4) ಗುಂಪು ಆಪ್ತ ಸಲಹೆ

79. ಒಬ್ಬ ಹುಡುಗಿ ಒಂದು ಪುಟ್ಟ ಕಥೆಯನ್ನು ಓದುತ್ತಾಳೆ. ಅವಳು ಅದನ್ನು ಓದಿದ ನಂತರ ಕಥೆಯ ಕೊನೆಯಲ್ಲಿ ನೀಡಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತಾಳೆ. ಮತ್ತು ಆ ಕಥೆಯ ಮುಕ್ತಾಯ ಬೇರೆಯ ರೀತಿಯಲ್ಲಿ ಇರಬೇಕಿತ್ತೆಂದು ಅಪೇಕ್ಷಿಸುತ್ತಾಳೆ. ಇದು ವಿದ್ಯಾರ್ಥಿನಿಯ ಈ ವರ್ತನೆಯನ್ನು ತೋರಿಸುತ್ತದೆ.
(1) ಕಥೆ ಓದುವುದರಲ್ಲಿ ಜಾಣತನ
(2) ಸೃಜನಶೀಲತೆ
(3) ತೆರೆದ ಮನಸ್ಸು
(4) ಬುದ್ಧಿವಂತಿಕೆ

80. ಒಬ್ಬ ಹುಡುಗ ಕಡಿಮೆ ಸ್ವಕೇಂದ್ರೀಕೃತ, ಕಡಿಮೆ ಆಕ್ರಮಣಕಾರಿ, ಕಡಿಮೆ ಸ್ವಾರ್ಥಿ ಮತ್ತು ಕಡಿಮೆ ಪರಾವಲಂಬಿ ಆದಾಗ ಆತನು ಈ ಬೆಳವಣಿಗೆಯನ್ನು ತಲುಪಿದ್ದಾನೆ ಎಂದು ತಿಳಿಯಬಹುದು.
(1) ಬೌತಿಕ ಬೆಳವಣಿಗೆ
(2) ಭಾವನಾತ್ಮಕ ಬೆಳವಣಿಗೆ
(3) ಮಾನಸಿಕ ಬೆಳವಣಿಗೆ
(4) ಸಾಮಾಜಿಕ ಬೆಳವಣಿಗೆ

81. ಒಂದು ಮಗು ಒಂದು ಚಮಚವನ್ನು ಹಿಡಿದುಕೊಳ್ಳುವುದನ್ನು ಕಲಿತಾಗ, ಆತನು ಮುಂದೆ ಅದೇ ರೀತಿಯ ಉದ್ದದ ಮತ್ತು ತೆಳುವಾದ ವಸ್ತುಗಳನ್ನು ಹಿಡಿದುಕೊಳ್ಳಬಲ್ಲ. ಇದು ಮುಂದಿನ ಕಲಿಕೆಗೆ
(1) ಸ್ವಾಂಗೀಕರಣವಾಗುತ್ತದೆ
(2) ಸ್ಥಳಾವಕಾಶವಾಗುತ್ತದೆ
(3) ಸ್ಕೀಮಾ (ಮಾನಸಿಕ ಚಿತ್ರಣ) ವಾಗುತ್ತದೆ
(4) ಹೊಂದಾಣಿಕೆಯಾಗುತ್ತದೆ

82. ಕಲಿಕೆಯು ನಿಧಾನ ಗತಿಯಲ್ಲಿ ಸಾಗಿ ಅಂತಿಮವಾಗಿ ನಿಂತು ಹೋಗುವ ಮತ್ತೆ ಅದು ಮುಂದುವರಿಯುವ ಸಾಧ್ಯತೆ ಇಲ್ಲ ಎನಿಸುವ ಬಿಂದು
(1) ಸಮತಲ
(2) ಆಸಕ್ತಿಯ ಕೊರತೆ
(3) ಬೇಸರ
(4) ಕಷ್ಟಕರ ಹಂತ

83. ಈ ಹಂತವನ್ನು ಕೂಟಯುಗ ಎಂದು ಕರೆಯುವರು.
(1) ಶಾಲಾ ಪೂರ್ವ ಹಂತ
(2) ಉತ್ತರ ಬಾಲ್ಯ ಹಂತ
(3) ಅನ್ವೇಷಣಾ ಹಂತ
(4) ಪ್ರಶ್ನಿಸುವ ಹಂತ

www.inyatrust.com



84. ಒಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಕಾಪಾಡಲು ಕೈಗೊಳ್ಳಬೇಕಾದ ಕ್ರಮ
(1) ಆಗಾಗ ಪ್ರವಾಸ ಕೈಗೊಳ್ಳುವುದು
(2) ವಿದ್ಯಾರ್ಥಿಗಳನ್ನು ಉನ್ನತ ಅಂಕ ಗಳಿಸುವಂತೆ ಪ್ರೋತ್ಸಾಹಿಸುವುದು
(3) ಅನಾರೋಗ್ಯಕರ ಸ್ಪರ್ಧೆಗಳನ್ನು ತಡೆಗಟ್ಟುವುದು
(4) ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು

85. ಒಬ್ಬ ಹುಡುಗಿ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಆದರೆ ಆಕೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದನ್ನು ಬಿಟ್ಟು ಅಳಲು ಪ್ರಾರಂಭಿಸುತ್ತಾಳೆ. ಇದು ಸೂಚಿಸುವುದೇನೆಂದರೆ,
(1) ಪಲಾಯನ (2) ಹೊಂದಾಣಿಕೆ
(3) ಪ್ರತಿಗಮನ (4) ನಕಾರಾತ್ಮಕತೆ

86. ಪ್ರೇರಣೆಯ ಪರಿಕಲ್ಪನೆಯನ್ನು ಸೂಕ್ತವಾಗಿ ಹೀಗೆ ವ್ಯಾಖ್ಯಾನಿಸಲಾಗಿದೆ.
(1) ಹೆಚ್ಚು ವಸ್ತುಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯ
(2) ಹೆಚ್ಚು ಅಂಕಗಳನ್ನು ಗಳಿಸುವ ಸಾಮರ್ಥ್ಯ
(3) ಮಾನ್ಯತೆ ಗಳಿಸುವ ಸಾಮರ್ಥ್ಯ
(4) ಅವನ / ಅವಳ ಗುರಿ ಸಾಧಿಸುವ ಸಾಮರ್ಥ್ಯ

87. ಶಿಕ್ಷಕರು ತನ್ನ ಮಕ್ಕಳನ್ನು ಗೃಹ ಕೈಗಾರಿಕಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನೇಯುವುದು, ಬುಟ್ಟಿ ಹೆಣೆಯುವುದು ಮತ್ತು ಆಟದ ಸಾಮಾನುಗಳನ್ನು ವೀಕ್ಷಿಸುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳ ವರ್ತನೆಯನ್ನು ಪರೀಕ್ಷಿಸುತ್ತಾರೆ. ಇದು ಇದಕ್ಕೆ ಉದಾಹರಣೆಯಾಗಿದೆ.
(1) ಯಾದರಚಿತ ಮೌಲ್ಯಮಾಪನ (2) ಮೌಲ್ಯಮಾಪನ
(3) ಪರಿಮಾಣಾತ್ಮಕ (4) ಸಂಕಲನಾತ್ಮಕ ಮೌಲ್ಯಮಾಪನ

88. ತರಗತಿಯ ಪ್ರತಿ ಮಗುವಿಗೆ ವಿವಿಧ ಸನ್ನಿವೇಶಗಳಿರುವ ಕಾರ್ಡ್‌ಗಳನ್ನು ಕೊಡಲಾಗುತ್ತದೆ. ಪ್ರತಿ ಮಗುವು ಈ ಸನ್ನಿವೇಶವನ್ನು ಕುರಿತು ಕಥೆಯನ್ನು ಹೆಣೆಯಬೇಕಾಗುತ್ತದೆ. ಮತ್ತು ಈ ಕಥೆಯನ್ನಾಧರಿಸಿ ಶಿಕ್ಷಕನು ವಿದ್ಯಾರ್ಥಿಯ ವರ್ತನೆಯನ್ನು ಅರ್ಥ ಮಾಡಿಕೊಳ್ಳುತ್ತಾನೆ. ಈ ತಂತ್ರವು
(1) ಸಂದರ್ಶನ (2) ಪ್ರಕ್ಷೇಪಣಾ ತಂತ್ರ
(3) ವೀಕ್ಷಣೆ (4) ಆಪ್ತಸಲಹೆ

89. ಸಂವೇಗ ಪ್ರತಿನಿಧಿಸುವುದು
(1) ಕದಡು (2) ಪ್ರತಿಭಟಿಸು
(3) ಚಲಿಸು (4) ಬೆಳೆಸು

90. ಗುಂಪಿನಲ್ಲಿ ವ್ಯಕ್ತಿಯ ಸ್ಥಾನವನ್ನು ಅಳೆಯುವ ಸೂಕ್ತವಾದ ವಿಧಾನ
(1) ಸಾಂದರ್ಭಿಕ ಪರೀಕ್ಷೆಗಳು (2) ಮಾನಸಿಕ ಪರೀಕ್ಷೆಗಳು
(3) ಸಮಾಜಮಿತಿ ತಂತ್ರ (4) ಚಿಕಿತ್ಸಾ ಸಂದರ್ಶನಗಳು



www.inyatrust.com

## PART – IV


## MATHEMATICS

**91.** ಒಂದು ಲಂಬಕೋನ ತ್ರಿಭುಜದಲ್ಲಿ, ಒಂದು ಕೋನವು 45° ಆಗಿದ್ದು, ಆದರ ವಿರುದ್ಧ ಬಾಹುವು ವಿಕರ್ಣಕ್ಕಿಂತ 'K' ನಷ್ಟಿದ್ದರೆ, 'K' ನ ಬೆಲೆಯು

(1) 1 (2) $\frac{1}{2}$

(3) $\frac{1}{\sqrt{2}}$ (4) $\sqrt{2}$

**92.** ಚಿತ್ರದಲ್ಲಿ '$x$' ನ ಬೆಲೆಯು




(1) 1 cm (2) 2 cm

(3) 2.5 cm (4) 3 cm

**93.** $\sqrt{a} = 24$ ಆದರೆ, $\sqrt{\frac{4a}{9}}$ ನ ಬೆಲೆ

(1) 6 (2) $8\sqrt{2}$

(3) 8 (4) 16

**94.** $4\left[2-\left\{3-\overline{1-4}\right\}\right]$ ನ ಬೆಲೆ

(1) 0 (2) – 16

(3) 8 (4) – 4

**Space For Rough Work**

95. 6 ರಿಂದ ಪೂರ್ಣವಾಗಿ ಭಾಗಿಸಲ್ಪಡುವ 3 ಅಂಕಿಯ ಒಟ್ಟು ಸಂಖ್ಯೆಗಳು

(1) 150 (2) 152

(3) 160 (4) 149

96. ಗೂಡ್ಸ್ ರೈಲೊಂದು 72 ಕಿ.ಮೀ/ಗಂಟೆ ವೇಗದಲ್ಲಿ ಚಲಿಸುತ್ತಾ 250 ಮೀ ಉದ್ದದ ನಿಲ್ದಾಣವನ್ನು 26 ಸೆಕೆಂಡುಗಳಲ್ಲಿ ದಾಟುತ್ತದೆ. ಗೂಡ್ಸ್ ರೈಲಿನ ಉದ್ದವು

(1) 300 ಮೀ (2) 260 ಮೀ

(3) 255 ಮೀ (4) 270 ಮೀ

97. 5 ಮೈಲು ಮತ್ತು 7 ಕಿಲೋಮೀಟರ್‌ಗಳ ನಡುವಿನ ವ್ಯತ್ಯಾಸ

(1) 0 km (2) 1 km

(3) 2 km (4) 3 km

98. ಒಬ್ಬನ ಬಳಿ ₹ 1, ₹ 5 ಮತ್ತು ₹ 10 ರ ಬಗೆಯ ನೋಟುಗಳನ್ನೊಳಗೊಂಡಂತೆ ₹ 480 ಇದೆ. ಅವನ ಬಳಿ ಇರುವ ಪ್ರತಿ ಬಗೆಯ ನೋಟುಗಳ ಸಂಖ್ಯೆ ಸಮವಾಗಿದ್ದರೆ, ಅವನ ಬಳಿ ಇರುವ ಒಟ್ಟು ನೋಟುಗಳ ಸಂಖ್ಯೆ

(1) 70 (2) 60

(3) 90 (4) 30

99. $x, \frac{1}{x}$ ಗಳ ಸರಾಸರಿ M ಆಗಿದೆ. ಹಾಗಾದರೆ $x^3$ ಮತ್ತು $\frac{1}{x^3}$ ಗಳ ಸರಾಸರಿ.

(1) $\frac{M(M^2-3)}{2}$ (2) $M(4M^2-3)$

(3) $M^3$ (4) $M^3+3$

100. 6 ಸಂಖ್ಯೆಗಳ ಸರಾಸರಿ 8 ಆಗಿದೆ. ಅವುಗಳಲ್ಲಿ ಐದು 8, 15, 0, 6 ಮತ್ತು 11 ಆಗಿವೆ. ಆರನೇ ಸಂಖ್ಯೆಯು

(1) 7 (2) 9

(3) 12 (4) 8

**Space For Rough Work**




www.inyatrust.com

**101.** ಎರಡು ಸಂಖ್ಯೆಗಳ ನಡುವಿನ ವ್ಯತ್ಯಾಸವು 1365 ಆಗಿದೆ. ದೊಡ್ಡ ಸಂಖ್ಯೆಯನ್ನು ಚಿಕ್ಕ ಸಂಖ್ಯೆಯಿಂದ ಭಾಗಿಸಿದಾಗ 6 ನ್ನು ಭಾಜಕವಾಗಿಯೂ, 15 ನ್ನು ಶೇಷವನ್ನಾಗಿ ಪಡೆಯುತ್ತೇವೆ. ಚಿಕ್ಕ ಸಂಖ್ಯೆಯು

(1) 295 (2) 240

(3) 360 (4) 270

**102.** ಕೊಟ್ಟಿರುವ ಅನುಕ್ರಮದಲ್ಲಿ '$x$' ನ ಬೆಲೆ




(1) 27 (2) 8

(3) 9 (4) 1

**103.** 2, 4, 8,….. ಈ ಅನುಕ್ರಮ ಸಂಖ್ಯೆಗಳಲ್ಲಿ 10 ನೇ ಪದವು

(1) 2048 (2) 1512

(3) 1024 (4) 1864

**104.** 7, 6, 7, 9, 8, 8, 10, 8 ಈ ದತ್ತಾಂಶಗಳ ಮಧ್ಯಾಂಕ ಮತ್ತು ಬಹುಲಕಗಳ ನಡುವಿನ ವ್ಯತ್ಯಾಸ

(1) 6 (2) 8

(3) 0 (4) 7

**105.** ಮೊದಲ ಮೂರು ಅವಿಭಾಜ್ಯ ಸಂಖ್ಯೆಗಳ ಮೊತ್ತವನ್ನು ಮೊದಲ ಮೂರು ಬೆಸ ಸಂಖ್ಯೆಗಳಿಂದ ಕಳೆದಾಗ, ಬರುವ ಉತ್ತರ

(1) 1 (2) – 1

(3) 0 (4) – 2

Bonus

**Space For Rough Work**

www.inyatrust.com



**106.** ಗಣಿತದ ಕಲಿಕೆಯನ್ನು ಒಂದು ತಾರ್ಕಿಕ ಪ್ರಕ್ರಿಯೆಯಾಗಿ ಪರಿಗಣಿಸಲು ಅಗತ್ಯವಾದ ಎರಡು ಅಂಶಗಳು :

(1) ಅನುಗಮನ ಮತ್ತು ಸಂಶ್ಲೇಷಣೆ (2) ನಿಗಮನ ಮತ್ತು ವಿಶ್ಲೇಷಣೆ

(3) ಅನುಗಮನ ಮತ್ತು ನಿಗಮನ (4) ಅಮೂರ್ತ ಮತ್ತು ಮೂರ್ತ ತರ್ಕಗಳು

**107.** ಗಣಿತದ ರಚನೆಗಳನ್ನು ತಾರ್ಕಿಕವಾಗಿ ರೂಪಿಸಲು ಉಪಯುಕ್ತವಾದ ಎರಡು ವಿನ್ಯಾಸಗಳು :

(1) ಸಂಖ್ಯಾ ಹಾಗೂ ಬೀಜಗಣಿತ (2) ಬೀಜೋಕ್ತಿಗಳು ಹಾಗೂ ರೇಖಾಗಣಿತ

(3) ಸಂಖ್ಯಾ ಹಾಗೂ ರೇಖಾಗಣಿತ (4) ರೇಖಾಗಣಿತ ಹಾಗೂ ನಕ್ಷೆ

**108.** "ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಶಾಲಾ ಹಂತದ ಮೊದಲ ಹತ್ತು ವರ್ಷಗಳವರೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಬೋಧಿಸಬೇಕು" ಎಂದು ಸಲಹೆ ನೀಡಿದ ಆಯೋಗ

(1) ದಾತಾರ್ ಆಯೋಗ (2) ಕೊಠಾರಿ ಆಯೋಗ

(3) ರಾಜಾರಾಮಣ್ಣ ಆಯೋಗ (4) ರಾಧಾಕೃಷ್ಣನ್ ಆಯೋಗ

**109.** ಗಣಿತದ ಪರಿಕಲ್ಪನೆಗಳ ಸಂವಹನಕ್ಕಾಗಿ ಉಪಯುಕ್ತವಾದ ಭಾಷೆ

(1) ಲಿಪಿ (2) ಸಾಂಖ್ಯಿಕ

(3) ಸಾಂಕೇತಿಕ (4) ಸಂಕ್ಷಿಪ್ತ

**110.** ಪ್ರಾಥಮಿಕ ಹಂತದ ಮಕ್ಕಳಲ್ಲಿ ಗಣಿತದ ಪರಿಕಲ್ಪನೆಗಳನ್ನು ಮೂಡಿಸಿಕೊಳ್ಳಲು ಅಗತ್ಯವಾದುದು

(1) ವೀಕ್ಷಣೆ

(2) ಪ್ರಯೋಗ

(3) ಅಮೂರ್ತ ಕಲಿಕಾ ಶಕ್ತಿ ಮತ್ತು ಸಾಮಾನ್ಯೀಕರಣ ಎರಡೂ

(4) ವೀಕ್ಷಣೆ ಮತ್ತು ಪ್ರಯೋಗ ಎರಡೂ

**111.** ವಿದ್ಯಾರ್ಥಿಯು ಶಿಕ್ಷಕರು ಕೇಳಿದ ಗಣಿತಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು ವಿಫಲನಾದಾಗ, ಶಿಕ್ಷಕರು ಮಾಡಬೇಕಾದ್ದು

(1) ಉತ್ತರಿಸದಿದ್ದಕ್ಕೆ ವಿದ್ಯಾರ್ಥಿಯನ್ನು ಬೈಯುವುದು

(2) ಅದೇ ಪ್ರಶ್ನೆಗೆ ಉತ್ತರವನ್ನು ಇತರೆ ವಿದ್ಯಾರ್ಥಿಗಳಿಂದ ಪಡೆಯುವುದು

(3) ವಿದ್ಯಾರ್ಥಿಯು ಸರಿ ಉತ್ತರ ನೀಡುವವರೆಗೂ ಪ್ರಶ್ನಿಸುತ್ತಿರುವುದು

(4) ಸರಿ ಉತ್ತರ ತಿಳಿದುಕೊಂಡು ಬರುವಂತೆ ವಿದ್ಯಾರ್ಥಿಯನ್ನು ಪ್ರೋತ್ಸಾಹಿಸುವುದು

2 or 4 Correct

**Space For Rough Work**



www.inyatrust.com

www.inyatrust.com



112. ಶೈಕ್ಷಣಿಕ ಮನೋವಿಜ್ಞಾನದಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳು ಉನ್ನತಿ ಹೊಂದಲು ಹೆಚ್ಚು ಕೊಡುಗೆಯನ್ನು ನೀಡಿದ ಅನ್ವೇಷಣಾ ವಿಧಾನವೆಂದರೆ,

(1) ಚಿಕಿತ್ಸಕ ವಿಧಾನ
(2) ಪ್ರಾಯೋಗಿಕ ವಿಧಾನ
(3) ಐತಿಹಾಸಿಕ ವಿಧಾನ
(4) ಸಮೀಕ್ಷಾ ವಿಧಾನ

113. ಅರೆ ಕುರುಡುತನವನ್ನು ಹೊಂದಿರುವ ಮಗುವಿಗೆ ಬೋಧಿಸುವಾಗ ಗಣಿತ ಶಿಕ್ಷಕರು ಕಪ್ಪುಹಲಗೆಯ ಮೇಲೆ ಲೆಕ್ಕ ಬಿಡಿಸುವಾಗ ಅನುಸರಿಸಬೇಕಾದ ತಂತ್ರ

(1) ಲೆಕ್ಕವನ್ನು ಕಪ್ಪು ಹಲಗೆಯ ಮೇಲೆ ದೊಡ್ಡದಾಗಿ ಬರೆಯುವುದು.
(2) ಲೆಕ್ಕವನ್ನು ಬಿಡಿಸಿ ನಿಧಾನವಾಗಿ ವಿವರಿಸುವುದು.
(3) ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
(4) ಮಗುವು ಹಿಂದಿನ ಬೆಂಚಿನಲ್ಲಿ ಕೂರಲು ಸಲಹೆ ನೀಡುವುದು.

114. ಲೆಕ್ಕ ಬಿಡಿಸುವಾಗ ಅನುಸರಿಸಬೇಕಾದ ವೈಜ್ಞಾನಿಕ ಪದ್ಧತಿಯ ಮೊದಲ ಹಂತ

(1) ಊಹೆಯನ್ನು ರಚಿಸುವುದು
(2) ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು
(3) ಊಹೆಯನ್ನು ಪ್ರಮಾಣಿಸಿ ನೋಡುವುದು
(4) ಸಮಸ್ಯೆಯ ಅರಿವು ಮೂಡಿಸುವುದು

115. ಕಲಿಯುವವನ ಸಿದ್ಧತಾ ಪರಿಕಲ್ಪನೆಯ ಸಂದರ್ಭದಲ್ಲಿ ಶಿಕ್ಷಕರು ಇದಕ್ಕಾಗಿ ಮೂಲಭೂತ ಪ್ರಾಮುಖ್ಯತೆ ನೀಡಬೇಕು.

(1) ಯಾವುದೇ ಹೊಸ ಚಟುವಟಿಕೆಗಳು
(2) ಪ್ರಾಥಮಿಕವಾಗಿ K.G. ತರಗತಿಗಳು
(3) ಗ್ರೇಡ್-I
(4) ಶೈಕ್ಷಣಿಕವಾಗಿ ತೊಂದರೆಯಿರುವ ವಿದ್ಯಾರ್ಥಿಗಳು

Space For Rough Work



www.inyatrust.com

www.inyatrust.com



116. "ಗಣಿತವು ಪರೋಕ್ಷ ಅಳತೆಯ ವಿಜ್ಞಾನವಾಗಿದೆ". ಹೀಗೆಂದು ವ್ಯಾಖ್ಯಾನಿಸಿದವರು
   (1) ಗಾಸ್ (2) ಕಾಮ್ಟೆ
   (3) ಕಾಂಟ್ (4) ಬಾಕಾನ್

117. ಗಣಿತಶಾಸ್ತ್ರದ ಪ್ರಮುಖ ಗುರಿಯು ಇದಕ್ಕೆ ಕೇಂದ್ರೀಕೃತವಾಗಿದೆ.
   (1) ವೈಯಕ್ತಿಕ ಅಭಿವೃದ್ಧಿ (2) ಸಮಾಜದಲ್ಲಿ ವೈಯಕ್ತಿಕ ಅಭಿವೃದ್ಧಿ
   (3) ಸಮಾಜದ ಅಭಿವೃದ್ಧಿ (4) ಸಮಾಜ ಮತ್ತು ಶಾಲೆಯ ಅಭಿವೃದ್ಧಿ

118. 15625 ÷ 25, ಈ ಭಾಗಾಕಾರದ ಲೆಕ್ಕ ಕುರಿತು ಶಿಕ್ಷಕರು ವಿದ್ಯಾರ್ಥಿಗಳ ಪರಿಕಲ್ಪನಾತ್ಮಕ ಜ್ಞಾನ ಮತ್ತು ಆದರ್ಶಗಳನ್ನು ಪರೀಕ್ಷಿಸಲು ಸೂಕ್ತವಾದ ಸಾಧನ ಪರೀಕ್ಷೆ
   (1) ನೈದಾನಿಕ ಪರೀಕ್ಷೆ (2) ಪರಿಹಾರಾತ್ಮಕ ಪರೀಕ್ಷೆ
   (3) ಅವಲೋಕನ ಪರೀಕ್ಷೆ (4) ಪ್ರಾಯೋಗಿಕ ಪರೀಕ್ಷೆ

119. ಕಿರಿಯ ಪ್ರಾಥಮಿಕ ಹಂತಗಳಲ್ಲಿ ಮಗುವು ಸಂಜ್ಞಾತ್ಮಕ ಬೆಳವಣಿಗೆಯ ಈ ಹಂತದಲ್ಲಿರುತ್ತದೆ.
   (1) ಮೂರ್ತ ಕ್ರಿಯಾತ್ಮಕ ಹಂತ
   (2) ಅಮೂರ್ತ ಕ್ರಿಯಾತ್ಮಕ ಹಂತ
   (3) ಚಟುವಟಿಕೆ ಆಧಾರಿತ ಕ್ರಿಯಾತ್ಮಕ ಹಂತ
   (4) ಅಂತರ್ ಕ್ರಿಯಾತ್ಮಕ ಹಂತ

120. ಪ್ರಖ್ಯಾತ ಗಣಿತ ಪಂಡಿತರು ಗಣಿತವನ್ನು ಪಠ್ಯಕ್ರಮದಲ್ಲಿ ಉನ್ನತ ಸ್ಥಾನದಲ್ಲಿರಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ,
   (1) ಗಣಿತವು ಸಾಮಾಜಿಕ ಮತ್ತು ವರ್ತನೆಯ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.
   (2) ಗಣಿತವು ಶಿಸ್ತಿನ ಅತ್ಯುತ್ತಮ ಮಾನಕವಾಗಿದೆ.
   (3) ಗಣಿತವು ಆಧುನಿಕ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.
   (4) ಗಣಿತವು ಜ್ಞಾನಾತ್ಮಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಅತ್ಯುನ್ನತ ಮಾನಕವಾಗಿದೆ.

**Space For Rough Work**



www.inyatrust.com

www.inyatrust.com



## PART – V
## ENVIRONMENTAL SCIENCE

**121.** ಶೀತಲ ಸಮರದ ಸಂದರ್ಭದಲ್ಲಿ ಭಾರತವು ಯಾವ ಬಣವನ್ನೂ ಸೇರಲಿಲ್ಲ. ಕಾರಣ,
(1) ದುರ್ಬಲವಾದ ಸೇನೆ ಮತ್ತು ಶಸ್ತ್ರಾಸ್ತ್ರಗಳ ಕೊರತೆ.
(2) ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಹಾಯದ ನಿರೀಕ್ಷೆ.
(3) ಆರ್ಥಿಕವಾಗಿ ಸಾಕಷ್ಟು ಹಿಂದುಳಿದಿರುವಿಕೆ.
(4) ದೇಶದ ವಿದೇಶಾಂಗ ನೀತಿ.

**122.** ಆಟಗಾರನೊಬ್ಬನಿಗೆ ಇರಬೇಕಾದ ಪ್ರಮುಖ ಲಕ್ಷಣಗಳಲ್ಲಿ ಇದು ಒಂದು.
(1) ಸಮಯ ಪ್ರಜ್ಞೆ (2) ಆತ್ಮ ವಿಶ್ವಾಸ
(3) ಏಕಾಗ್ರತೆ (4) ಕ್ರೀಡಾ ಮನೋಭಾವ

**123.** ಜಲಚರಗಳ ಉಸಿರಾಟಕ್ಕೆ ಆಮ್ಲಜನಕ ಪೂರೈಸುವುದು.
(1) ಭೂಮಿಯ ವಾತಾವರಣ ಒದಗಿಸುತ್ತದೆ
(2) ಜಲಚರ ಪ್ರಾಣಿಗಳೇ ತಯಾರಿಸಿಕೊಳ್ಳುತ್ತವೆ
(3) ಜಲವಾಸಿ ಸಸ್ಯಗಳು ಒದಗಿಸುತ್ತವೆ
(4) ಭೂವಾಸಿ ಸಸ್ಯಗಳು ನೀಡುತ್ತವೆ

**124.** 'ಟೆಂಡೋಫೈಟಾ' ವರ್ಗಕ್ಕೆ ಇದು ಉತ್ತಮ ಉದಾಹರಣೆ.
(1) ದ್ವೈವಾರ್ಷಿಕ ಸಸ್ಯಗಳು (2) ಬಹುವಾರ್ಷಿಕ ಸಸ್ಯಗಳು
(3) ಅಲಂಕಾರಿಕ ಸಸ್ಯಗಳು (4) ಜಲವಾಸಿ ಸಸ್ಯಗಳು

**125.** ಲಿಪಿಡ್‌ಗಳ ಇರುವಿಕೆಯನ್ನು ಪತ್ತೆ ಹಚ್ಚುವಿಕೆಗಾಗಿ ಬಳಸಲ್ಪಡುವ ರಾಸಾಯನಿಕ
(1) ಬೆನೆಡಿಕ್ಟ್ ದ್ರಾವಣ (2) ಅಯೋಡಿನ್
(3) ಕಾಪರ್ ಸಲ್ಫೇಟ್ (4) ಇಥೈಲ್ ಆಲ್ಕೋಹಾಲ್

**126.** 'ಮಣ್ಣು' ಪರಿಸರದ ಘಟಕಗಳಲ್ಲಿ ಒಂದು, ಇದು ಹೆಚ್ಚಾಗಿ ಆವಾಸವಾಗಿರುವುದು
(1) ಖನಿಜ ಸಂಪನ್ಮೂಲಗಳಿಗೆ (2) ಜೀವಿಗಳಿಗೆ
(3) ಮರಗಿಡಗಳಿಗೆ (4) ಜಲ ಸಂಪನ್ಮೂಲಗಳಿಗೆ

**127.** 'ಮಾರ್ಚ್ 22' ಈ ದಿನಾಚರಣೆ
(1) ವಿಶ್ವ ಆರೋಗ್ಯ ದಿನ (2) ವಿಶ್ವ ತಂಬಾಕುರಹಿತ ದಿನ
(3) ವಿಶ್ವ ಜಲ ದಿನ (4) ವಿಶ್ವ ರಕ್ಷಣಾ ದಿನ

**128.** ಕ್ಯಾಲ್ಸಿಯಂ ಸಿಲಿಕೇಟ್ + ಕ್ಯಾಲ್ಸಿಯಂ ಅಲ್ಯುಮಿನೇಟ್ =
(1) ಸಿರಾಮಿಕ್ (2) ಗ್ಲಾಸ್
(3) ಸಿಮೆಂಟ್ (4) ಪ್ಲಾಸ್ಟಿಕ್



www.inyatrust.com

www.inyatrust.com



129. ಸೌರಮಂಡಲದಿಂದ ಭೂಮಿಗೆ ಮುಕ್ತವಾಗಿ ಬೀಳುತ್ತಿರುವ ಕಾಯದ ವೇಗ ಹೆಚ್ಚಾಗುತ್ತದೆ, ಕಾರಣ

(1) ಚಲನಶಕ್ತಿಯನ್ನು ಕಳೆದುಕೊಳ್ಳುತ್ತದೆ.

(2) ಅಧಿಕ ಚಲನ ಶಕ್ತಿಯನ್ನು ಗಳಿಸಿಕೊಳ್ಳುತ್ತದೆ.

(3) ದ್ರವ್ಯರಾಶಿ ಹೆಚ್ಚಿಸಿಕೊಳ್ಳುತ್ತದೆ.

(4) ಹೆಚ್ಚು ಹಗುರವಾಗುತ್ತದೆ.

130. ಸಾವಯವ ಗೊಬ್ಬರ ಬಳಸಿ ಉತ್ಪಾದಿಸಿದ ಆಹಾರ ಪದಾರ್ಥಗಳನ್ನು ಬಳಸುವುದರಿಂದ

(1) ತ್ಯಾಜ್ಯಗಳ ಮರುಬಳಕೆಗೆ ಅವಕಾಶ (2) ಪರಿಸರ ಮಾಲಿನ್ಯಕ್ಕೆ ತಡೆ

(3) ಆರೋಗ್ಯದಲ್ಲಿ ಉತ್ತಮತೆ (4) ಆರ್ಥಿಕ ಸ್ಥಿತಿ ಸುಧಾರಣೆ

131. ORS ದ್ರಾವಣ

(1) ಕಾಯಿಸಿ ಆರಿಸಿದ 1 ಲೋಟ ನೀರು + 1 ಚಮಚ ಸಕ್ಕರೆ + ¼ ಚಮಚ ಉಪ್ಪು + 4 ಹನಿ ನಿಂಬೆರಸ

(2) 1 ಲೋಟ ನೀರು + 1 ಚಮಚ ಸಕ್ಕರೆ + ¼ ಚಮಚ ಉಪ್ಪು + 4 ಹನಿ ನಿಂಬೆರಸ

(3) ಕಾಯಿಸಿ ಆರಿಸಿದ 1 ಲೋಟ ನೀರು + 1 ಚಮಚ ಸಕ್ಕರೆ + 1 ಚಮಚ ಉಪ್ಪು +1 ಚಮಚ ನಿಂಬೆರಸ

(4) 1 ಲೋಟ ನೀರು + 1 ಚಮಚ ಸಕ್ಕರೆ + ¼ ಚಮಚ ಉಪ್ಪು + 1 ಚಮಚ ನಿಂಬೆರಸ

132. ಹುಲಿ, ಕಪ್ಪೆ, ಬಾತುಕೋಳಿ, ಹಾವು ಈ 4 ಜೀವಿಗಳನ್ನು ಮರುಳುಗಾಡಿನಲ್ಲಿ ಬಿಡಲಾಗಿದೆ, ಕೂಡಲೇ ವಾತಾವರಣಕ್ಕೆ ಹೊಂದಿಕೊಳ್ಳುವ ಜೀವಿ

(1) ಹಾವು (2) ಹುಲಿ

(3) ಬೆಕ್ಕು (4) ಪಾರಿವಾಳ

Bonus

133. ಮೇಲ್ಮಟ್ಟದ ಜೀವಿಗಳಲ್ಲಿ ಜಠರದಲ್ಲಿನ ಪಚನಕ್ರಿಯೆಗೆ ಸಹಾಯಕವಾಗಿರುವ ಕಿಣ್ವ

(1) ರೆನಿನ್ (2) ಲಿಪೇಸ್

(3) ಸುಕ್ರೇಸ್ (4) ಮಾಲ್ಟೇಸ್

134. ಸಹರಾದ ಬಿಡೋಯಿನ್ ಸಮುದಾಯದವರು ವೃತ್ತಿಯ ಆಧಾರಿತವಾಗಿ ಹೀಗೆ ಗುರ್ತಿಸಲ್ಪಟ್ಟಿದ್ದಾರೆ.

(1) ಪಶುಪಾಲಕ ಅಲೆಮಾರಿಗಳು (2) ಬೇಟೆಗಾರಿಕಾ ಅಲೆಮಾರಿಗಳು

(3) ಕೃಷಿ ವಲಸೆಗಾರರು (4) ಋತುಕಾಲಿಕ ವಲಸೆಗಾರರು



www.inyatrust.com

135. ಹೆದೆಯೇರಿಸಿದ ಬಿಲ್ಲು ಪ್ರಚ್ಛನ್ನ ಶಕ್ತಿಯನ್ನು ಹೊಂದಿರಲು ಕಾರಣ

(1) ಸಾಪೇಕ್ಷ ಸ್ಥಾನ ಬಲ (2) ಸಾಪೇಕ್ಷ ಗುರುತ್ವಾಕರ್ಷಣ ಬಲ

(3) ಸಾಪೇಕ್ಷಾ ಕರ್ಷಣ ಬಲ (4) ಸಾಪೇಕ್ಷ ವಿಕರ್ಷಣ ಬಲ

136. 'ಪೌಷ್ಟಿಕತೆ' ಕುರಿತಂತೆ ತರಗತಿಯನ್ನು ಪರಿಣಾಮಕಾರಿಗೊಳಿಸಲು ತೆಗೆದುಕೊಳ್ಳಬಹುದಾದ ಕಾರ್ಯ

(1) ಚಾರ್ಟ್ ಪ್ರದರ್ಶಿಸಿ ವಿದ್ಯಾರ್ಥಿಗಳೊಡನೆ ಚರ್ಚಿಸುವುದು.

(2) ನ್ಯೂನ ಪೋಷಣೆಗೆ ಒಳಗಾದ ವಿದ್ಯಾರ್ಥಿಯನ್ನು ಕರೆದು ದೇಹವನ್ನು ಪ್ರದರ್ಶಿಸುವುದು.

(3) ಸಂಗ್ರಹಿಸಿದ ಆಹಾರ ಪದಾರ್ಥಗಳನ್ನು ಕುರಿತು ವಿವರಣೆ ನೀಡುವುದು.

(4) ಪೌಷ್ಟಿಕಯುಕ್ತ ಆಹಾರಪದಾರ್ಥಗಳಿಗೆ ವಿವಿಧ ಉದಾಹರಣೆ ನೀಡುವುದು.

137. ಪರಿಸರ ಅಧ್ಯಯನ ಕಲಿಕೆಯಲ್ಲಿ ನಿರಂತರ-ವ್ಯಾಪಕ ಮೌಲ್ಯಮಾಪನಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

(1) ಪಠ್ಯ ಸಹಿತ ಅಭ್ಯಾಸಗಳನ್ನು ಪೂರ್ಣಗೊಳಿಸುವುದು.

(2) ಮಾಹಿತಿ ಸಂಗ್ರಹಿಸಿ ದಾಖಲಿಸುವುದು.

(3) ಯೋಜನೆಗಳನ್ನು ಕೈಗೊಂಡು ಮಂಡಿಸುವುದು.

(4) ಸಮಸ್ಯೆಗಳನ್ನು ಬಿಡಿಸಿ ಸುಲಭೀಕರಿಸುವುದು.

138. ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಪರಿಸರ ಅಧ್ಯಯನ ಕಲಿಕೆಯನ್ನು ಅನುಕೂಲಿಸುವವರಿಗೆ ಇದು ಅವಶ್ಯಕ.

(1) ಪರಿಸರ ಅಧ್ಯಯನ ಅಭ್ಯಾಸ ಪುಸ್ತಕಗಳ ವಿನ್ಯಾಸ

(2) ಪರಿಸರ ಸಂಬಂಧಿತ ಸಮಸ್ಯೆಗಳ ಅರಿವು

(3) ಪರಿಸರ ಕಲಿಕೆಯ ವಿಧಾನ ಮತ್ತು ತಂತ್ರಗಳು

(4) ಪರಿಸರ ಕಲಿಕೆಯ ಪಠ್ಯಕ್ರಮದ ರೂಪುರೇಷೆ

139. ವಿದ್ಯಾರ್ಥಿಯು ತನ್ನ ಈ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳಲು ಪ್ರಾಥಮಿಕ ತರಗತಿಗಳಲ್ಲಿ ಪರಿಸರ ಶಿಕ್ಷಣದ ಅವಶ್ಯಕತೆಯಿದೆ.

(1) ಶಾಲೆ (2) ಸುತ್ತಲಿನ ಪರಿಸರ

(3) ಮನೆ (4) ಸಮಾಜ

140. ಪರಿಸರ ಅಧ್ಯಯನದ ಕಲಿಕೆಯನ್ನು ಶಿಶುಸ್ನೇಹಿಯನ್ನಾಗಿಸುವ ಚಟುವಟಿಕೆಯ ತಂತ್ರ

(1) ಶೈಕ್ಷಣಿಕ ಪ್ರವಾಸ (2) ಸಂದರ್ಶನ

(3) ಗುಂಪುಚರ್ಚೆ (4) ಕ್ಷೇತ್ರಭೇಟಿ



www.inyatrust.com

141. ನಾಗರೀಕತೆಗಳಿಗೆ ಪೂರಕವಾದ ಪಠ್ಯಾಂಶಗಳನ್ನು ಚರ್ಚಿಸುವಾಗ ಮುಖ್ಯವಾದ ಅಂಶವೆಂದರೆ, ಅವುಗಳ

(1) ವೈಶಿಷ್ಟ್ಯವನ್ನು ಅವಲೋಕಿಸುವುದು

(2) ಉಗಮದ ಕಾರಣಗಳನ್ನು ಅರಿಯುವುದು

(3) ಕೊಡುಗೆಗಳನ್ನು ಪ್ರಶಂಶಿಸುವುದು

(4) ಪ್ರಸ್ತುತದೊಂದಿಗೆ ಹೋಲಿಸಿ ವ್ಯತ್ಯಾಸ ಕಂಡು ಕೊಳ್ಳುವುದು

142. ವಿದ್ಯಾರ್ಥಿಗಳ ಜ್ಞಾನ ಸಂರಚನಾವಾದದ ಕಲಿಕಾತತ್ವದ ಅಡಿಯಲ್ಲಿ ಶಿಕ್ಷಕರ ಜವಾಬ್ದಾರಿಯುತ ಕಾರ್ಯವೆಂದರೆ,

(1) ಕಲಿಕೆಯ ನಿಯಮಗಳನ್ನು ಪಾಲಿಸುವುದು

(2) ಸ್ವತಂತ್ರ ಜ್ಞಾನ ಸಂಗ್ರಹಣೆಗೆ ಜೊತೆಯಾಗುವುದು

(3) ಸಮಂಜಸ ಕಲಿಕೋಪಕರಣಗಳನ್ನು ಬಳಸುವುದು

(4) ಯೋಜಿತ ಗೃಹಪಾಠಗಳನ್ನು ಸಿದ್ಧಪಡಿಸುವುದು

143. ರಾಷ್ಟ್ರೀಯ ಹಬ್ಬಗಳ ಆಚರಣೆಯ ಪ್ರಮುಖ ಆಶಯ

(1) ಮೌಲ್ಯಗಳ ಅಳವಡಿಕೆ

(2) ಮನರಂಜನೆ

(3) ಸಮುದಾಯದ ಪಾಲ್ಗೊಳ್ಳುವಿಕೆ

(4) ಸಂಘಟನಾ ಕೌಶಲ

144. ಪರಿಸರ ಶಿಕ್ಷಣದ ಪ್ರಧಾನ ಕಾಳಜಿಯು

(1) ಪ್ರತಿದಿನವನ್ನೂ ಪರಿಸರ ದಿನವನ್ನಾಗಿ ಆಚರಿಸುವುದೇ ಆಗಿದೆ.

(2) ಪರಿಸರದ ಬಗ್ಗೆ ಜನ ಜಾಗೃತಿಗೊಳಿಸುವುದೇ ಆಗಿದೆ.

(3) ಸಂರಕ್ಷಣೆಯ ವಿಧಿ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದೇ ಆಗಿದೆ.

(4) ಸಮಸ್ಯೆಗಳ ಪರಿಹಾರೋಪಾಯಕ್ಕೆ ತಂತ್ರಗಳನ್ನು ಅಳವಡಿಸಿಕೊಳ್ಳುವುದೇ ಆಗಿದೆ.

145. 5 ನೇ ತರಗತಿಯ 10 ವಿದ್ಯಾರ್ಥಿಗಳು ಭೂಪಟದಲ್ಲಿ ದಿಕ್ಕುಗಳನ್ನು ಗುರ್ತಿಸುವುದರಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ, ಇಲ್ಲಿ ಸೂಕ್ತವಾದ ಪರಿಹಾರ ಕ್ರಮ

(1) ಮರುಬೋಧನೆ

(2) ಪರಿಹಾರ ಬೋಧನೆ

(3) ಪೂರಕ ಬೋಧನೆ

(4) ಕ್ರಿಯಾ ಸಂಶೋಧನೆ

www.inyatrust.com



146. ಪರಿಸರ ಅಧ್ಯಯನದ ಕಲಿಕೆಯ ಉದ್ದೇಶ

(1) ಪರಿಕಲ್ಪನೆಗಳನ್ನು ಅರ್ಥೈಸುವುದು

(2) ವಿಜ್ಞಾನ ಮತ್ತು ಸಮಾಜವಿಜ್ಞಾನವನ್ನು ಕಲಿಸುವುದು

(3) ವೈಜ್ಞಾನಿಕ ಮತ್ತು ಸಾಮಾಜಿಕ ಪರಿಕಲ್ಪನೆಗಳನ್ನು ಏಕೀಕೃತಗೊಳಿಸುವುದು

(4) ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥಮಾಡಿಕೊಳ್ಳುವುದು

147. ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಿಕ್ಷಕರಿಗೆ ಸಾಮರ್ಥ್ಯವರ್ಧನಾ ಕಾರ್ಯತಂತ್ರಗಳ ಅವಶ್ಯಕತೆಯಿದೆ ಏಕೆಂದರೆ,

(1) ವೃತ್ತಿಪರ ವಿಕಸನಕ್ಕೆ ಸಹಕಾರಿಯಾಗಲು

(2) ವೇತನ ತುಟ್ಟಿಭತ್ಯೆಯಲ್ಲಿ ಹೆಚ್ಚಳವಾಗಲು

(3) ಪರಿಕಲ್ಪನಾತ್ಮಕ ಮತ್ತು ಬೋಧನಾತತ್ವಗಳಲ್ಲಿ ಸ್ಪಷ್ಟತೆ ಕಾಣಲು

(4) ಸಿ.ಸಿ.ಇ. ಗೆ ಅನುಗುಣವಾಗಿ ಶಿಕ್ಷಕರು ಸಕ್ರಿಯಗೊಳ್ಳಲು

148. 'ಪೃಥ್ವಿಯ ಭೂಸ್ವರೂಪಗಳು' ಈ ಸಾಮರ್ಥ್ಯ ಕಲಿಕೆಗೆ ಸಮಂಜಸವೆನಿಸುವ ಕಲಿಕೋಪಕರಣ

(1) ಚಾರ್ಟ್ಸ್

(2) ವೀಡಿಯೋ ಕ್ಲಿಪ್ಪಿಂಗ್ಸ್

(3) ಡೊಮಿನೋ ಕಾರ್ಡ್ಸ್

(4) ಫ್ಲ್ಯಾಶ್ ಕಾರ್ಡ್ಸ್

149. ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಬೋಧನೆಯ ಪ್ರಮುಖ ವಸ್ತು

(1) ಕಲಿಕೋಪಕರಣ (2) ಸಾಮರ್ಥ್ಯ

(3) ಪಠ್ಯಪುಸ್ತಕ (4) ಚಟುವಟಿಕೆ

150. ಮೇಧಾ ಪಾಟ್ಕರ್‌ರವರು ಮುಂಚೂಣಿ ವಹಿಸಿದ ಹೋರಾಟವಿದು

(1) ಚಂಪಾರಣ್ಯ (2) ಚಿಪ್ಕೊ

(3) ಅಪ್ಪಿಕೊ (4) ನರ್ಮದಾ ಬಚಾವ್



www.inyatrust.com

www.InyaTrust.com

# REVISED KEY ANSWERS OF KARNATAKA TEACHERS ELIGIBILITY TEST - 2014

**Applied Paper** : **PaperI (Class I – V)**

**Language - I** : **Kannada**

**Language - II** : **English**

**Optional Paper** : **Child Development & Pedagogy,Mathematics and EVS**

| Q No. | Key Ans | Q No. | Key Ans | Q No. | Key Ans | Q No. | Key Ans |
|---|---|---|---|---|---|---|---|
| 1 | 3 | 39 | 3 | 77 | 3 | 115 | 1 |
| 2 | 2 | 40 | 3 | 78 | 2 | 116 | 2 |
| 3 | 2 | 41 | 1 | 79 | 2 | 117 | 2 |
| 4 | 1 | 42 | 4 | 80 | 4 | 118 | 4 |
| 5 | 4 | 43 | 2 | 81 | 2 | 119 | 1 |
| 6 | 3 | 44 | 1 | 82 | 1 | 120 | 4 |
| 7 | 2 | 45 | 4 | 83 | 2 | 121 | 4 |
| 8 | 2 | 46 | 3 | 84 | 3 | 122 | 4 |
| 9 | 3 | 47 | 4 | 85 | 3 | 123 | 3 |
| 10 | 4 | 48 | 1 | 86 | 4 | 124 | 3 |
| 11 | 4 | 49 | 2 | 87 | 3 | 125 | 4 |
| 12 | 3 | 50 | 3 | 88 | 2 | 126 | 2 |
| 13 | 3 | 51 | 2 | 89 | 1 | 127 | 3 |
| 14 | 2 | 52 | 4 | 90 | 3 | 128 | 3 |
| 15 | 4 | 53 | 3 | 91 | 3 | 129 | 1 |
| 16 | 4 | 54 | 1 | 92 | 2 | 130 | 3 |
| 17 | 1 | 55 | 2 | 93 | 4 | 131 | 1 |
| 18 | 2 | 56 | 4 | 94 | 2 | 132 | * |
| 19 | 4 | 57 | 3 | 95 | 1 | 133 | 1 |
| 20 | 2 | 58 | 1 | 96 | 4 | 134 | 1 |
| 21 | 4 | 59 | 2 | 97 | 2 | 135 | 3 |
| 22 | 3 | 60 | 4 | 98 | 3 | 136 | 3 |
| 23 | 3 | 61 | 3 | 99 | 2 | 137 | 3 |
| 24 | 2 | 62 | 3 | 100 | 4 | 138 | 3 |
| 25 | 2 | 63 | 4 | 101 | 4 | 139 | 2 |
| 26 | 3 | 64 | 3 | 102 | 1 | 140 | 4 |
| 27 | 1 | 65 | 3 | 103 | 3 | 141 | 4 |
| 28 | 1 | 66 | 4 | 104 | 3 | 142 | 2 |
| 29 | 4 | 67 | 1 | 105 | * | 143 | 1 |
| 30 | 2 | 68 | 4 | 106 | 3 | 144 | 4 |
| 31 | 2 | 69 | 3 | 107 | 3 | 145 | 4 |
| 32 | 3 | 70 | 3 | 108 | 2 | 146 | 3 |
| 33 | 4 | 71 | 4 | 109 | 3 | 147 | 3 |
| 34 | 4 | 72 | 1 | 110 | 4 | 148 | 2 |
| 35 | 1 | 73 | 3 | 111 | A | 149 | 2 |
| 36 | 3 | 74 | 1 | 112 | 2 | 150 | 4 |
| 37 | 2 | 75 | 1 | 113 | 1 | | |
| 38 | 4 | 76 | 3 | 114 | 4 | | |

**Note :** '*' - one mark awarded to all the candidates
'A' - 2 or 4 is the correct answer.
'B' - 1 or 4 is correct answer.

**Date :** 17-Aug-2014 11:30:29


www.InyaTrust.com